Business of the House

Sri K. PUTTASWAMY (Minister for Law, Labour and Parliamentary Affairs).—I do not know whether the Hon. Speaker was present in the House when we came to an understanding that we should complete the financial business and pass the High Court (Amendment) Bill before 4–30 P.M. to-day. It is a very simple Bill. According to me, it may not require more than half an hour. It is for the Leader of the Opposition to say what time he needs.

Sri S. SIVAPPA.—We have to give full scope for discussion, Sir.

2–30 P.M.

Mr. SPEAKER.—How many hon. Members want to speak on the Supplementary Grants ?

(Three hon. Members stood up)

Three Hon'ble Members have expressed their desire to speak. I will give them ten minutes each and the debate will be closed by 3 P.M. and then I will call upon the Hon. Minister to reply.

There is also private Members' business today and that should not be affected.

Sri H. M. CHANNABASAPPA.—I want to speak on the Supplementary Grants, Sir.

(a) Supplementary and additional Demands for grants for 1969–70 (First Instalment).

(b) Demands for grants to cover Expenditure incurred in excess of voted grants for the year 1964–65.

(c) Demands for grants to cover expenditure incurred excess of voted grants for the year 1965–66.

(Debate Continued)

† ಶ್ರೀ ಎಲ್. ಶ್ರೀಕಂಠಯ್ಯ (ನಂಜನಗೂಡು).—ಸ್ವಾಮಿ, ಈ ಸಪ್ಲಿಮೆಂಟರಿ ಎಸ್ಟಿಮೇಟ್ಸ್ ಬಗ್ಗೆ ಇದರ ಅಭಿಪ್ರಾಯವನ್ನು ವ್ಯಕ್ತಪಡಿಸಲು 5 ನಿಮಿಷ ಕಾಲ ಕೊಟ್ಟಿದ್ದೀರಿ. 5 ನಿಮಿಷದಲ್ಲೇ ಮುಗಿಸುವುದು ಕಷ್ಟದ ಕೆಲಸ. ನಮ್ಮ ಅಭಿಪ್ರಾಯವನ್ನು ಹೇಳಲಿ ಹೇಳದೆ ಇರಲಿ ನಿಮಗೆ ತೋಚಿದಂತೆ ನೀವು ಮಾಡಿಕೊಂಡು ಹೋಗುತ್ತೀರಿ. ಆದರೂ ಊದುವ ಶಂಖ ಊದುವುದು ನಮ್ಮ ಕರ್ತವ್ಯ ಆದುದರಿಂದ ಈ ಸಪ್ಲಿಮೆಂಟರಿ ಎಸ್ಟಿಮೇಟ್ಸ್ ಬಗ್ಗೆ ಸರ್ಕಾರ ಎಲ್ಲಿ ತಪ್ಪು ಮಾಡಿದೆ ಅದರ ಕಡೆಗೆ ಅವರ ಗಮನ ಸೆಳೆಯುವುದು ನನ್ನ ಕರ್ತವ್ಯ ಎಂದು ನಾನು ತಿಳಿದುಕೊಂಡಿದ್ದೇನೆ. ಇದರಲ್ಲಿ ಮುಖ್ಯವಾಗಿ ಮೂರು ವಿಷಯಗಳಮೇಲೆ ಸಂಕ್ಷಿಪ್ತವಾಗಿ ತಿಳಿಸಬೇಕೆಂದು ಇಷ್ಟಪಡುತ್ತೇನೆ.

ಮೊದಲನೆಯದಾಗಿ ಶ್ರೀಮಾನ್ ಸಿ. ಕೆ. ರಾಜಯ್ಯಶೆಟ್ಟರು ಇದನ್ನು ಸೂಕ್ಷ್ಮವಾಗಿ ಪ್ರಸ್ತಾಪ ಮಾಡಿದರು. ಕರ್ನಾಟಕ ಪಬ್ಲಿಷಿಂಗ್ ಹೌಸ್‌ಗೆ 9 ಲಕ್ಷ ರೂಪಾಯಿ ಸಾಲವನ್ನು ಕೊಟ್ಟಿದ್ದಾರೆ ಎಂದು ಹೇಳಿದರು. ಆದರ ಜೊತೆಗೆ 6 ವಾಲ್ಯೂಂ ಇರತಕ್ಕ ಪುಸ್ತಕಗಳನ್ನು ಪ್ರತಿಯೊಂದು ಸ್ಕೂಲೂ ಒಂದೊಂದು ಕಾಪಿಯನ್ನು ಕೊಂಡುಕೊಳ್ಳಬೇಕೆಂದು, ಇದಕ್ಕಾಗಿ ಲೈಬ್ರರಿ ಗ್ರಾಂಟ್‌ನಿಂದ 120 ರೂಪಾಯಿ ತೆಗೆದುಕೊಳ್ಳಬಹುದು ಎಂದು ಆದೇಶ ಕೊಟ್ಟಿದ್ದಾರೆ. ಅವರಿಗೆ ಕೊಟ್ಟಿರುವ ಹಣಕ್ಕೆ ಆ ಸಂಸ್ಥೆಯ ಬಿಲ್ಡಿಂಗ್ ಮೆಷಿನರೀಸ್ ಇವನ್ನೆಲ್ಲಾ ಮಾರ್ಟ್‌ಗೇಜ್ ಮಾಡಿಕೊಂಡಿದ್ದೇವೆ, ನಮ್ಮ ದುಡ್ಡಿಗೇನೂ ಮೋಸ ಇಲ್ಲ ಎಂದು ಹೇಳಿದ್ದಾರೆ. ಆದರೆ ಈಗ ಇರತಕ್ಕಂಥ ಪರಿಸ್ಥಿತಿಯಲ್ಲಿ ಈ ವೆಚ್ಚವನ್ನು ಪರಿಗಣಿಸಬೇಕಾಗಿದೆ. ಏತಕ್ಕೆಂದರೆ ಒಂದು ಸಣ್ಣ ಉದಾಹರಣೆ ಹೇಳುವುದಾದರೆ ಸರ್ಕಾರದವರು ಮೊಟ್ಟಮೊದಲಬಾರಿಗೆ ಕನ್ನಡದ ವಿಶ್ವಕೋಶವನ್ನು ಪ್ರಾರಂಭ ಮಾಡಬೇಕೆಂದು ಕಲ್‌ಚರಲ್ ಅಂಡ್ ಲಿಟರೆರಿ ಅಸೋಸಿಯೇಷನ್ ಆಶ್ರಯದಲ್ಲಿ ವಿಪುಲವಾದ ದುಡ್ಡು ಖರ್ಚುಮಾಡಿದರು. ಕಡೆಗೆ ನಿಭಾಯಿಸಲಾರದೆ ಇದನ್ನು ವಿಶ್ವವಿದ್ಯಾನಿಲಯಕ್ಕೆ ರವಾನಿಸಿದ್ದಾರೆ. ಈಗ ಕೆಲಸ ಸಾಗುತ್ತಾ ಇದೆ. ಇದರ ಕಷ್ಟಸುಖಗಳು ಏನೆಂಬುದು ನನಗೂ ಗೊತ್ತು. ಕನ್ನಡದ ವಿಶ್ವಕೋಶಕ್ಕೆ ನಾನೂ ಕೆಲವು ಲೇಖನಗಳನ್ನು ಕೊಟ್ಟಿದ್ದೇನೆ. ಬೆಂಗಳೂರು ವಿಶ್ವವಿದ್ಯಾನಿಲಯದಲ್ಲಾಗಲಿ, ಕರ್ನಾಟಕ ವಿಶ್ವವಿದ್ಯಾನಿಲಯದಲ್ಲಾಗಲೀ ಪರಿಣತರು ಇರಲಿಲ್ಲವೇ ? ಅವರನ್ನು ಏತಕ್ಕೆ ಕೇಳಲಿಲ್ಲಾ ? ಅವರಿಗೆ ಇದನ್ನು ಏತಕ್ಕೆ ವಹಿಸಲಿಲ್ಲಾ ? ಈ ಸಂಸ್ಥೆಯಲ್ಲಿ ಈ ಕೆಲಸ ಮಾಡುವುದಕ್ಕೆ ಎಷ್ಟು ಜನ ಅನುಭವಸ್ಥರು ಇದ್ದಾರೆ ? ಯಾವ ಅನುಭವ ಇಲ್ಲದಿದ್ದರೂ ಕೂಡ, ಯಾರನ್ನೂ ಕೇಳದೆ, ಈ ಸಂಸ್ಥೆ ಲಾಭ ಮಾಡಿಕೊಳ್ಳುವ ಉದ್ದೇಶದಿಂದ, ಇವನು ನಮ್ಮವ ಎಂದು ಅವರಿಗೆ 9 ಲಕ್ಷ ರೂಪಾಯಿ ಕೊಟ್ಟಿದ್ದೀರಲ್ಲಾ ? ಯಾವ ಆಧಾರದ ಮೇಲೆ 9 ಲಕ್ಷ ರೂಪಾಯಿ ಕೊಟ್ಟಿದ್ದೀರಿ.? 9 ಲಕ್ಷ ರೂಪಾಯಿ ಕೊಟ್ಟರೂ ಕೂಡ ಆ ಸಂಸ್ಥೆಯ ಸ್ಥಾನಮಾನಗಳೇನು ? ಆದರ ಸಂಚಾಲಕರು ಯಾರು ? ಅವರು ಮಾಡಿದರೆ ಅದು ಜೂನಿಯರ್ ವಿಶ್ವಕೋಶವಾಗುತ್ತದೆಯೇ ? ಇದನ್ನು ಜಡ್ಜ್ ಮಾಡಿದವರು ಯಾರು ? ಜೂನಿಯರ್ ವಿಶ್ವಕೋಶವನ್ನು ಮಾಡುವಂಥಾವರು ಮೊದಲು ಯಾವ ಯಾವುದನ್ನು ಪ್ರಕಟ ಮಾಡಿದ್ದಾರೆ ? ಅವರು ತೆಗೆದುಕೊಂಡಿರುವ 9 ಲಕ್ಷ ರೂಪಾಯಿಗಳನ್ನು ತೀರಿಸುವುದಕ್ಕಾಗಿ ಅವರು ಏನು ಕಚಡದ ಪುಸ್ತಕ ಬರೆದುಕೊಟ್ಟರೂ ನಾವು ಅದನ್ನು ತೆಗೆದುಕೊಂಡು ಹೈಸ್ಕೂಲ್‌ಗಳಿಗೂ, ಮಿಡಲ್‌ಸ್ಕೂಲ್‌ಗಳಿಗೂ ತುಂಬಿಕೊಳ್ಳಬೇಕಾಗುತ್ತದೆ. ಇದನ್ನು ನಿರ್ಧಾರ ಮಾಡಿದವರು ಯಾರು ? ಕೇವಲ ವಿದ್ಯಾ ಮಂತ್ರಿಗಳೇ, ಅಥವಾ ಹಣಕಾಸಿನ ಮಂತ್ರಿಗಳೇ ಅಥವಾ ಮಂತ್ರಿಮಂಡಲವೇ ? ಕರ್ಣಾಟಕ ಪಬ್ಲಿಷಿಂಗ್ ಹೌಸ್ ಜೂನಿಯರ್ ಎನ್‌ಸೈಕ್ಲೋಪೀಡಿಯಾ ತಯಾರು ಮಾಡುವುದಕ್ಕೆ ಸಮರ್ಥವಿದೆ ಎಂದು ಯಾರು ಹೇಳಿದವರು ? ಅಲ್ಲಿ ಯಾರಾದರೂ ಪರಿಣತರಿದ್ದಾರೆಯೇ ? ವಿಶ್ವವಿದ್ಯಾಲಯ ಅಥವಾ ಯಾವುದಾದರೂ ಪರಿಣತರ ಮಂಡಲಿ ಅವರಿಗೆ ಸರ್ಟಿಫಿಕೇಟನ್ನು ಕೊಟ್ಟಿದೆಯೇ ? ದುಂದು ವೆಚ್ಚಕ್ಕೆ ಹೇಗೆ ದುಡ್ಡು ಹೋಗುತ್ತಿದೆ ಎನ್ನುವುದಕ್ಕೆ ಇದಕ್ಕಿಂತ ಬೇರೆ ನಿದರ್ಶನವಿರಲಾರದು. ಡಾಕ್ಟರ್ ಶಿವರಾಮ ಕಾರಂತ ಅವರು ಒಂದು ಗ್ರಂಥವನ್ನು ಬರೆದಿದ್ದಾರೆ. ಅವರಿಗೆ ಪರಿಹಾರ ಕೊಟ್ಟಿಲ್ಲ. ಇವರು ಬರೆದಿರುವ ಗ್ರಂಥವನ್ನೇ ಜೂನಿಯರ್ ಎನ್‌ಸೈಕ್ಲೋಪೀಡಿಯಾ ಆಗಿ ಪರಿವರ್ತಿಸಿ, ಬೇಕಾದ ಸೌಲಭ್ಯಗಳನ್ನು ಕೊಡುತ್ತೇವೆಂದು ಹೇಳಿದ್ದರೆ ಉತ್ತಮ ಗ್ರಂಥ ಬರುತ್ತಿತ್ತು. ಡಾಕ್ಟರ್ ಶಿವರಾಮ ಕಾರಂತ ಅವರು ಕಾಡಿನಲ್ಲಿರುವ ಪುತ್ತೂರು ಗ್ರಾಮದಲ್ಲಿ ಕುಳಿತು ಸ್ವಸಾಮರ್ಥ್ಯದಿಂದ ಇಂಥ ಒಂದು ಪುಸ್ತಕವನ್ನು ಹೊರಗೆಡಹಿದರು. ಅಂಥವರಿಗೆ ಏನೂ ಪುರಸ್ಕಾರವಿಲ್ಲದಾಗಿದೆ. ನಾವು ಒಂದು ಜೂನಿಯರ್ ಎನ್‌ಸೈಕ್ಲೋಪೀಡಿಯಾ ತರುತ್ತೇವೆಂದು ಯಾರೋ ಹೇಳಿದ್ದಕ್ಕೆ ಅವರಿಗೆ 9 ಲಕ್ಷ ರೂಪಾಯಿ ಕೊಟ್ಟಿರಲ್ಲಾ ಇದು ಎಂಥ ವರ್ತನೆ ? ಇಂಥದೆಲ್ಲ ಒಂದು ರಾಕೆಟ್ ಆಗಿ ಪರಿಣಮಿಸಿದೆ. ಪಠ್ಯ ಪುಸ್ತಕಗಳ ಸಂಬಂಧದಲ್ಲಿ ಹಗ್ಗಣಗಳು ಸೇರಿಕೊಂಡು ಒಂದು ರಾಕೆಟ್ ಯಾವರೀತಿ ಆಗಿತ್ತೋ ಅಂಥದ್ದು ಈಗ ಷುರುವಾಗಿದೆ. ಸರ್ಕಾರದವರಿಗೆ 9 ಲಕ್ಷ ರೂಪಾಯಿಗಳು ಹೆಚ್ಚಾಗಿದ್ದ ಪಕ್ಷದಲ್ಲಿ ಅದನ್ನು ವಿಶ್ವವಿದ್ಯಾಲಯದವರಿಗೆ ಕೊಡಿ. ಅಲ್ಲಿ ಪರಿಣತರಿದ್ದಾರೆ, ಅಲ್ಲಿ ಒಂದು ಸ್ಟಾಂಡರ್ಡ್ ಇದೆ ಎನ್ನುವ ಧೈರ್ಯವಾದರೂ ಇದೆ. ಅದನ್ನೆಲ್ಲ ಬಿಟ್ಟು ಯಾವುದೋ ಒಂದು ಸಂಸ್ಥೆಗೆ ಹಣವನ್ನು ಕೊಡುವುದು ನ್ಯಾಯವೇ ? ಒಂದು ಎನ್‌ಸೈಕ್ಲೋಪೀಡಿಯಾ ತಯಾರು ಮಾಡುವ ಕೆಲಸ ಸುಲಭವಾದುದಲ್ಲ. ಬ್ರಿಟಿಷ್ ಎನ್‌ಸೈಕ್ಲೋಪೀಡಿಯಾ ತಯಾರಿಸಬೇಕಾದರೆ 50-60 ವರ್ಷ ಹಿಡಿಯಿತು. ಸಣ್ಣ ಸಣ್ಣ ಆರ್ಟಿಕಲ್ಸ್ ಬರೆಯುವುದಕ್ಕೆ ಮನೆ ಮನೆಗೆ ಹೋಗಿ ತಿರುಪೆ ಬೇಡತಕ್ಕ ಸಂದರ್ಭ ಬಂದಿದೆ. ಯಾರು ಯಾರೋ ಬರೆದುದನ್ನು ಸಂಪಾದನೆ ಮಾಡಿ ಒಂದು ಪುಸ್ತಕವನ್ನು ತಯಾರುಮಾಡಿ ಕೊಟ್ಟರೆ ಆಗ ಏನು ಮಾಡುವವರಿದ್ದೀರಿ ? ಯಾರ ಸಲಹೆಯನ್ನೂ ತೆಗೆದುಕೊಳ್ಳದೆ 9 ಲಕ್ಷ ರೂಪಾಯಿಗಳನ್ನು ಈ ಸಂಸ್ಥೆಗೆ ಕೊಟ್ಟಿರುವುದು ದುಂದು ವೆಚ್ಚದ ಪರಮಾವಧಿ ಎಂದು ನಾನು ಹೇಳಬೇಕಾಗಿದೆ. ಈಗಾಗಲೇ ಆರು ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದಾರೆ ಮತ್ತು ಮಿಕ್ಕದನ್ನು ಕೊಡುವುದರಲ್ಲಿದ್ದಾರೆ.

(ಶ್ರೀ ಎಲ್. ಶ್ರೀಕಂಠಯ್ಯ)

ನಾನು ಮಾನ್ಯ ಹಣಕಾಸು ಮಂತ್ರಿಗಳಲ್ಲಿ ಕೇಳಿಕೊಳ್ಳುವುದು ಕಷ್ಟಕಾಲದಲ್ಲಿ ದುಡ್ಡನ್ನು ಈ ರೀತಿ ವ್ಯಯ ಮಾಡಬೇಡಿ, ಕೊಟ್ಟಮೇಲೆ ದುಡ್ಡು ಹಿಂದಕ್ಕೆ ಬರುವುದಿಲ್ಲ, ಸರ್ಕಾರ ರೈಟ್ ಆಫ್ ಮಾಡಬೇಕಾಗುತ್ತದೆ. ನಿಮ್ಮ ಹತ್ತಿರ ದುಡ್ಡಿದ್ದರೆ ಮೈಸೂರು ವಿಶ್ವವಿದ್ಯಾಲಯಕ್ಕೋ ಅಥವಾ ಬೆಂಗಳೂರು ವಿಶ್ವವಿದ್ಯಾಲಯಕ್ಕೋ, ಕರ್ನಾಟಕ ವಿಶ್ವವಿದ್ಯಾಲಯಕ್ಕೋ ಕೊಟ್ಟರೆ ಅಲ್ಲಿ ಕನ್ನಡ ಪ್ರೊಫೆಸರುಗಳಿರುವುದರಿಂದ ಜೂನಿಯರ್ ಎನ್‌ಸೈಕ್ಲೋಪೀಡಿಯಾ ಅವರು ಮಾಡಿ ಕೊಡುತ್ತಾರೆ. ಆದರೆ ಸರ್ಕಾರ ಈ ಹಣವನ್ನು ವ್ಯಯ ಮಾಡಿ, ಎಲ್ಲಾ ಆದನಂತರ ನಮ್ಮ ಒಪ್ಪಿಗೆಯನ್ನು ಕೊಡಿ ಎಂದು ಕೇಳಿದರೆ ಕೊಡುವುದಕ್ಕಾಗುವುದಿಲ್ಲ ಎಂದು ಘಂಟಾಘೋಷವಾಗಿ ತಮ್ಮ ಮುಂದೆ ಹೇಳಬೇಕಾಗಿದೆ.

ಕಿತ್ತೂರು ಚನ್ನಮ್ಮ ಮೆಮೋರಿಯಲ್ ಫಂಡಿಗೆ ಎರಡು ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದಾರೆ. ನಾನು ಒಂದು ಸಣ್ಣ ಉದಾಹರಣೆಯನ್ನು ಕೊಡಬೇಕಾಗುತ್ತದೆ. ಹೆಣ್ಣು ಮಕ್ಕಳ ವಿದ್ಯಾಭ್ಯಾಸವನ್ನು ಮುಂದುರಿಸಬೇಕು ಎನ್ನುವ ಆಶೆಯನ್ನು ಉಳ್ಳವರಾಗಿದ್ದೇವೆ ಎಂದು ತಿಳಿದುಕೊಳ್ಳೋಣ. ಮೈಸೂರಿನಲ್ಲಿ ಮಹಾರಾಣಿ ಕಾಲೇಜಿದೆ. ಅಲ್ಲಿ ಸುಮಾರು ಮೂರು ಸಾವಿರ ವಿದ್ಯಾರ್ಥಿನಿಯರು ವ್ಯಾಸಂಗ ಮಾಡುತ್ತಿದ್ದಾರೆ. ಅಲ್ಲಿ ಹಾಸ್ಟಲ್ ಎಂದು ಇದೆ. ಅಲ್ಲಿ 130 ಜನರಿಗೆ ಅವಕಾಶವಿದೆ. ಆದರೆ 700 ಅರ್ಜಿಗಳು ಬಂದಿವೆ. ಹಾಸ್ಟಲಿನಲ್ಲಿರುವುದಕ್ಕೆ ಜಾಗವಿಲ್ಲ. ಹತ್ತು ವರ್ಷದಿಂದ ಒತ್ತಾಯ ಮಾಡುತ್ತಿದ್ದರೂ ಅದನ್ನು ನೋಡುವವರಿಲ್ಲ. ಆ ಹಾಸ್ಟಲಿನಲ್ಲಿ ಇರುವವರಿಗೆ ಅನುಕೂಲಗಳನ್ನು ಕಲ್ಪಿಸಿಕೊಡಲು ಒಂದು ಕಟ್ಟಡವಾಗಬೇಕು ಎಂದರೆ ಆಗಿಲ್ಲ. ಹೀಗಿರುವಾಗ ಕಿತ್ತೂರು ರಾಣಿ ಚನ್ನಮ್ಮನ ಹೆಸರಿನಲ್ಲಿ ಸ್ಥಾಪಿತವಾಗಲಿರುವ ವಿದ್ಯಾ ಸಂಸ್ಥೆಗೆ ಎರಡು ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದಾರೆ. ಮಹಾರಾಣಿ ಕಾಲೇಜು ಹಾಸ್ಟಲಿನಲ್ಲಿ ರೂಮುಗಳ ಸೌಕರ್ಯ ಸಾಲದೆ ಒಂದೊಂದು ರೂಮಿನಲ್ಲಿ 5 ಹುಡುಗಿಯರಿರಬೇಕಾಗಿದೆ, ಅಲ್ಲಿ ಹೆಚ್ಚು ಸೌಕರ್ಯ ಮಾಡಿಕೊಡಲು ಹಣವಿಲ್ಲ, ಕುರಿಗಳಂತೆ ಇರುವ ಅಲ್ಪ ಜಾಗದಲ್ಲಿ ಹುಡುಗಿಯರು ಇರಬೇಕಾಗಿದೆ. ಹಾಗಿರುವಾಗ ಕಿತ್ತೂರು ಚನ್ನಮ್ಮನವರ ಸ್ಮಾರಕ್ಕಾಗಿ ಹಣ ಖರ್ಚುಮಾಡಲು ಹೊರಟಿದ್ದಾರೆ, ಇದರಲ್ಲಿ ಶ್ರೀ ಕಂಠಿಯವರಿಗೆ ಬಹಳ ಆಸಕ್ತಿ. ಆಕೆ ವೀರ ರಾಣಿ ಇರಬಹುದು, ಬೇಕಾದರೆ ಇನ್ನೂ 10 ಲಕ್ಷ ತೆಗೆದುಕೊಳ್ಳಲಿ. ಆದರೆ ಅಕೌಂಟ್ ಅಲ್ಲದಿಯೋ ಇಲ್ಲವೋ ಗೊತ್ತಿಲ್ಲ. ಅಲ್ಲಿ ಕೂಡ ಖಾದಿ ಬೋರ್ಡಿನಲ್ಲಾಗಿರುವಂತೆ ಅವ್ಯವಸ್ಥೆಯಾಗಬಹುದು. ಮಹಾರಾಣಿ ಕಾಲೇಜ್ ಹಾಸ್ಟಲಿಗೆ 10 ಸಾವಿರ ರೂಪಾಯಿಗಳನ್ನಾದರೂ ಕೊಟ್ಟರೆ ಒಳ್ಳೆಯ ಹೆಸರು ಬರುವುದು ಶ್ರೀ ರಾಮಕೃಷ್ಣ ಹೆಗಡೆಯವರು ಬಹಳ ಕಾಲ ಹಣಕಾಸಿನ ಮಂತ್ರಿಗಳಾಗಿರಲಿ ಎಂದು ಹಾಸ್ಟಲಿನ ವಾಸಿಗಳು ಹರಸುತ್ತಾರೆ. 20 ಲಕ್ಷ ಕೊಟ್ಟು ಒಂದು ಹಾಸ್ಟಲ್ ಕಟ್ಟಿಸಿದರೆ ಹೆಣ್ಣುಮಕ್ಕಳು ಒಳ್ಳೆಯ ರೀತಿಯಿಂದ ವಿದ್ಯಾಭ್ಯಾಸ ಮಾಡಲು ಅವಕಾಶವಾಗುತ್ತದೆ, ಹಾಗೆ ಮಾಡಬೇಕು ಎಂದು ಹೇಳಿ ನನ್ನ ಮಾತುಗಳನ್ನು ಮುಕ್ತಾಯಮಾಡುತ್ತೇನೆ.

† ಶ್ರೀ ವಿ. ಎಲ್. ಶಿವಪ್ಪ (ತಿಪಟೂರು).—ಈಗ ಹಣಕಾಸಿನ ಸಚಿವರು ಹೆಚ್ಚುವರಿ ಬೇಡಿಕೆಯನ್ನು ಮಂಡಿಸಿ 39 ಕೋಟಿ ಚಿಲ್ಲರೆ ರೂಪಾಯಿಗಳನ್ನು ಕೇಳಿದ್ದಾರೆ. ಅವರಿಗೆ ಇದು ಬಹಳ ಚಿಕ್ಕ ಮೊಬಲಗು ಎಂದು ಕಾಣುತ್ತದೆ. ನಿನ್ನೆಯಿಂದ ಅನೇಕ ಸದಸ್ಯರು ಬಜೆಟ್ ಸರಿಯಾಗಿ ಖರ್ಚಾಗುತ್ತಿಲ್ಲ ಎಂದು ಹೇಳಿದ್ದಾರೆ. ಅದು ಸರಿಯೇ ಎಂದು ನೋಡಬಹುದು. ಮಂತ್ರಿಗಳು ನಿಶ್ಚಿಂತೆಯಿಂದ ಇದ್ದಾರೆ. ಆದರೆ ಹಣ ಯಾರದು ? ನಾವು ಹೇಳುವುದು ಪ್ರಾಮಾಣಿಕವಾದುದೆಂದು ನಂಬಿ ಲೋಪದೋಷಗಳನ್ನು ಸರಿಪಡಿಸಬೇಕೆಂದು ಪ್ರಾರ್ಥನೆಮಾಡುತ್ತೇನೆ.

33ನೆಯ ಡಿಮ್ಯಾಂಡಿನಲ್ಲಿ ಕ್ಷಾಮ ಪರಿಹಾರ ನಿಧಿಗೆ ಬೇಡಿಕೆ ಇದೆ, ಇದರಲ್ಲಿ ಬಹಳ ತಾರತಮ್ಯವಿದೆ. ತುಮಕೂರು ಡಿವಿಜನ್ನಿಗೆ ಸುಮಾರು 5 ಲಕ್ಷ ಮಾತ್ರ ಕೊಡಲಾಗಿದೆ, ಅಲ್ಲಿ ಇರಿಗೇಷನ್‌ಗೆ ಬಾವಿಗಳ ಅವಶ್ಯಕತೆ ಹೆಚ್ಚಾಗಿದೆ, ಆದರೆ ಅದಕ್ಕೆ ಸಾಕಷ್ಟು ಹಣ ಒದಗಿಸಿಲ್ಲ. ಅದೇ ಬೆಂಗಳೂರು ಮತ್ತು ಬೆಳಗಾಂ ಡಿವಿಜನ್ನುಗಳಿಗೆ 30 ಲಕ್ಷ ಕೊಡಲಾಗಿದೆ, ಇರಿಗೇಷನ್ ವೆಲ್ಸ್‌ಗೆ ಮೈಸೂರು ಡಿವಿಜನ್ನಿನಲ್ಲಿ 6 ಲಕ್ಷ ಕೊಡಲಾಗಿದೆ. ಹೋದ ವರ್ಷ ಸುಮಾರು 8—10 ಕೋಟಿ 64 ಫ್ಯಾಮಿನ್ ಫಂಡಿನಿಂದ ಖರ್ಚುಮಾಡಿದೆ, ಸುಮಾರು ನೂರು ಬಾವಿಗಳಿಗೆ ಹೋದ ಸಲ ಅವಕಾಶ ಮಾಡಿರಬಹುದು. ಕಮ್ಯೂನಿಕೇಷನ್ ಮತ್ತು ಇತರ ಬಾಬಿಗೆ ಹಣ ಒದಗಿಸಿದರೆ ಅದರಲ್ಲಿ ಕಂಟ್ರಾಕ್ಟರ್‌ಗೇ ಹೆಚ್ಚು ಅನುಕೂಲವಾಗುವುದು, ದಿನವೂ ಕೆಲಸ ಮಾಡುವ ಕೂಲಿಗಳಿಗೆ ಕೂಲಿ ದೊರೆಯುಂತೆ ಮಾಡುತ್ತೇವೆಂದು ಹೇಳುವುದು ಕಾಗದದಲ್ಲಿ ಮಾತ್ರ ಇದೆ. ಇದು ಸರಿಯಿಲ್ಲ. ಬಾವಿಗಳಿಗೆ ಹೆಚ್ಚು ಹಣ ಒದಗಿಸಬೇಕಾಗಿತ್ತು. ತುಮಕೂರು ಜಿಲ್ಲೆಯಲ್ಲಿ ಕ್ಷಾಮ ಬರುವುದು ಜಾಸ್ತಿ, ಅಲ್ಲಿ ಯಾವ ಪ್ರಾಜೆಕ್ಟು

ಗಳನ್ನೂ ಮಾಡುವುದಕ್ಕೆ ಸಾಧ್ಯವಿಲ್ಲ, ಇರಿಗೇಷನ್ ವೆಲ್ಸ್‌ಗೆ ಅನುಕೂಲಮಾಡಿಕೊಟ್ಟರೆ ಜನರಿಗೆ ಸಹಾಯವಾಗುತ್ತದೆ. ಹಾಗೆ ಮಾಡುವುದು ಒಳ್ಳೆಯದು. ಮೊದಲು ಕೊಟ್ಟಿದ್ದರ ಜೊತೆಗೆ ರೈತರಿಗೆ ಪುನಃ 5 ಸಾವಿರ ರೂಪಾಯಿ ಒದಗಿಸುತ್ತಾರೆ. ಈ ರೀತಿ ಸುಮಾರು ಒಟ್ಟು ಹತ್ತು ಸಾವಿರ ರೂಪಾಯಿಗಳವರೆಗೂ ಖರ್ಚಾಗುತ್ತದೆ. ಜನರಿಗೆ ಕೂಲಿ ಜಾಸ್ತಿ ಸಿಕ್ಕುತ್ತದೆ. ಸಾಲದ ವಿತರಣೆ ಯಾವ ರೀತಿ ಮಾಡಿಕೊಂಡಿದ್ದೀರಿ ಎಂದರೆ ಅದನ್ನು ವಾಪಸು ಕೊಡಬೇಕಾದರೆ ಇಷ್ಟು ಬಡ್ಡಿ ಮತ್ತು ಇಷ್ಟು ಇನ್‌ಸ್ಟಾಲ್‌ಮೆಂಟ್ ಪ್ರಕಾರ ಕೊಡಬೇಕೆಂದು ಮಾಡಿದ್ದೀರಿ. ಕ್ಷಾಮ ಪರಿಹಾರದ ಹಣದಲ್ಲಿ ತಾವು ಸಾಲ ಕೊಡುವಾಗ ಲ್ಯಾಂಡ್ ಮಾರ್ಟ್‌ಗೇಜ್ ಬ್ಯಾಂಕ್‌ನವರು ಕೊಡತಕ್ಕ ಸಾಲದ ಬಡ್ಡಿಗಿಂತ ಕಡಿಮೆ ಬಡ್ಡಿ ದರದಲ್ಲಿ ಕೊಡಬೇಕು. ಕಮ್ಯೂನಿಕೇಷನ್ ಮುಂತಾದ ಕಾರ್ಯಗಳಿಗೆ ಕೋಟ್ಯಾಂತರ ರೂಪಾಯಿ ಖರ್ಚು ಮಾಡುತ್ತಾ ಇದ್ದೀರಿ, ಹಾಗಿರುವಾಗ ತಾವು ಬಡ್ಡಿ ಇಲ್ಲದೆ ಈ ಸಾಲಗಳನ್ನು ಕೊಟ್ಟರೆ ಬಹಳ ಅನುಕೂಲವಾಗುತ್ತದೆ. 30 ಲಕ್ಷ ರೂಪಾಯಿಗಳನ್ನು ತಾವು ಒದಗಿಸಿದರೆ 60 ಲಕ್ಷ ರೂಪಾಯಿಗಳ ಕೆಲಸವಾಗುತ್ತದೆ. ಇದೇ ರೀತಿ ಇರಿಗೇಷನ್ ವೆಲ್ಸ್. ತುಮಕೂರು ಜಿಲ್ಲೆಯಲ್ಲಿ ತಾವು ನಿರೀಕ್ಷಿಸಿದುದಕ್ಕಿಂತಲೂ ಹೆಚ್ಚು ಅನುಕೂಲವಾಗುತ್ತದೆ. ಆದ್ದರಿಂದ ಈ ಕೆಲಸಗಳನ್ನೆಲ್ಲಾ ಪ್ರಾಮುಖ್ಯವಾಗಿ ಮಾಡಬೇಕೆಂದು ಜಿಲ್ಲಾಧಿಕಾರಿಗಳಿಗೆ ತಾವು ಅಪ್ಪಣೆ ಮಾಡಬೇಕು.

ಕೋ-ಆಪರೇಟೀವ್ ಸೊಸೈಟಿಗಳ ವಿಚಾರದಲ್ಲಿ ತಾವು ತೀವ್ರ ಗಮನ ಹರಿಸದಿದ್ದರೆ ಈ ದೇಶದ ಹಣ ಪೋಲಾಗುತ್ತದೆ, ಕೊನೆಗೆ ಈ ಸಹಕಾರ ಪದ್ಧತಿಯೇ ಬೇಡ, ಇದನ್ನು ವಾಪಸು ತಗೆದು ಕೊಂಡು ಬಿಡಿ ಎಂದು ಹೇಳಬೇಕಾಗುತ್ತದೆ ಡಿಮ್ಯಾಂಡ್ ನಂಬರ್ 44ರಲ್ಲಿ 65 ಲಕ್ಷ ರೂಪಾಯಿ ಸ್ಟೇಟ್ ಮಾರ್ಕೆಟಿಂಗ್ ಸೊಸೈಟಿಗೆ ಕೊಟ್ಟಿದ್ದೀರಿ, ಇದುವರೆಗೂ ಇದಕ್ಕೆ ಎಷ್ಟು ಸಬ್ಸಿಡಿ ಕೊಟ್ಟಿದ್ದೀರಿ ? ಎಷ್ಟು ಹಣ ಷೇರ್ ಕ್ಯಾಪಿಟಲ್ ಕೊಟ್ಟಿದ್ದೀರಿ ? ಈಗ ಎಷ್ಟು ಹಣ ಸಂಪಾದನೆ ಮಾಡಿವೆ ? ಯಾವ ಸ್ಥಿತಿಯಲ್ಲಿದೆ ? 65 ಲಕ್ಷ ರೂಪಾಯಿ ಷೇರ್ ಕ್ಯಾಪಿಟಲ್‌ಗೆ ಕೊಡುತ್ತೇವೆ ಎಂದರೆ ಹಿಂದೆ ನಾಮಿನೇಷನ್ ಪದ್ಧತಿ ಇತ್ತು, ಅದರಂತೆಯೇ ಇವತ್ತೂ ಕೂಡ ನಾಮಿನೇಟ್ ಆಗಿರತಕ್ಕ ಅಧ್ಯಕ್ಷರು ಇದ್ದಾರೆ. ಅವರು ಯಾವ ರಾಜಕಾರಣ ಮಾಡುತ್ತ ಇದ್ದಾರೋ ಗೊತ್ತಿಲ್ಲ. ಅನೇಕ ಸಾರಿ ಹೇಳಿದ್ದೇನೆ. ಈ ನಿಮ್ಮ ಸಹಕಾರ ಪದ್ಧತಿ ಎಷ್ಟೆಷ್ಟು ಕೇಂದ್ರಸರ್ಕಾರದವರು ನಿಮಗೆ ಹಣ ಕೊಡುತ್ತಾರೆಯೋ ಅದರಮೇಲೆ ಅವಲಂಬಿಸಿದೆ, ಇದನ್ನು ಡೆವಲಪ್ ಮಾಡುತ್ತಾ ಇದ್ದೀರಿ. ಆದರೆ ಇದರಿಂದ ಅನುಕೂಲವಾಗುತ್ತಾ ಇಲ್ಲ, ಹಣ ಹಾಳಾಗುತ್ತಾ ಇದೆ. ಚುನಾವಣೆಗಳಲ್ಲಿ ಮತ್ತು ನಿಮ್ಮ ಸಂಸ್ಥೆಯ ಪರವಾಗಿ ಕೆಲಸ ಮಾಡತಕ್ಕ ಜನರಿಗೆ ದಾನದತ್ತವಾಗಿ ಈ ಹಣವನ್ನು ಹರಿಸುತ್ತಾ ಇದ್ದೀರಿ ಎಂದ ಹೇಳಬೇಕಾಗಿದೆ.

ಈಗ ಅಪೆಕ್ಸ್ ಬ್ಯಾಂಕ್‌ಗೆ ರಿಸರ್ವ್ ಬ್ಯಾಂಕಿನವರು ಕೊಟ್ಟಿರತಕ್ಕ ಸುಮಾರು 30 ಕೋಟಿ ರೂಪಾಯಿ ವಸೂಲಾಗಿಲ್ಲ. ಅದನ್ನು ವಸೂಲು ಮಾಡದೇ ಇದ್ದ ಪಕ್ಷದಲ್ಲಿ ರಿಸರ್ವ್ ಬ್ಯಾಂಕಿನವರು ಹಣ ಕೊಡುವುದಿಲ್ಲ. ಧಾರವಾಡ, ಬಿಜಾಪುರ ಮತ್ತು ಬೆಳಗಾಂ ಈ ಮೂರು ಜಿಲ್ಲೆಗಳಿಂದ ಸುಮಾರು 8 ಲಕ್ಷ ರೂಪಾಯಿ ಅಪೆಕ್ಸ್ ಬ್ಯಾಂಕಿಗೆ ಕೊಡಬೇಕಾದ ಹಣ ಬಾಕಿ ಇದೆ. ಅದನ್ನು ವಾಪಸು ಕೊಟ್ಟಿಲ್ಲ, ಕೊಡುವ ಪದ್ಧತಿಯನ್ನು ಅವರು ಇಟ್ಟುಕೊಂಡಿಲ್ಲ ಎಂದು ಕೇಳಿದ್ದೇನೆ. ಈ ರೀತಿ ಬಹಳ ಹಣ ಅಪವ್ಯಯವಾಗುತ್ತಾ ಇದೆ. ಕರ್ನಾಟಕ ಎರಡು ಆಗಬೇಕೆಂಬ ದೃಷ್ಟಿಯಿಂದ ನಾನು ಇದನ್ನು ಹೇಳುತ್ತಾ ಇಲ್ಲ. ಈ ರೀತಿ ಲಕ್ಷಾಂತರ ರೂಪಾಯಿಗಳನ್ನು ಜನಗಳಿಗೆ ಕೊಟ್ಟಿದ್ದಾರೆ, ರೀಪೇಮೆಂಟ್ ಆಗುತ್ತಾ ಇಲ್ಲ. ರಿಸರ್ವ್ ಬ್ಯಾಂಕಿನವರು 90 ಪರ್ಸೆಂಟ್‌ನಷ್ಟು ಹಣವನ್ನು ವಾಪಸು ಕೊಟ್ಟರೆ ಪುನಃ ಕೊಡುತ್ತೇವೆ, ಇಲ್ಲದೇ ಇದ್ದರೆ ಕೊಡುವುದಿಲ್ಲ ಎಂದು ಹೇಳುತ್ತಾರೆ, ಲ್ಯಾಂಡ್ ಡೆವಲಪ್‌ಮೆಂಟ್ ಬ್ಯಾಂಕ್ ಮುಖಾಂತರ ಅಗ್ರಿಕಲ್ಚರಲ್ ರೀ ಫೈನಾನ್ಸ್ ಕಾರ್ಪೊರೇಷನ್‌ವರು ಕೊಡತಕ್ಕ ಒಂದು ಕೋಟಿ 20 ಲಕ್ಷ ರೂಪಾಯಿಗೇ ಆಗಲಿ ಮತ್ತೆ ಬೇರೆ ಯಾವ ಸಾಲಗಳಿಗೇ ಆಗಲಿ ಅವಕಾಶ ವಾಗುತ್ತಾ ಇಲ್ಲ. ಇದರ ಕಡೆಗೆ ಗಮನ ಕೊಡಬೇಕೆಂದು ಹೇಳುತ್ತೇನೆ. ತಾವು ಇದನ್ನು ಖಂಡಿತ ಬದಲಾವಣೆ ಮಾಡಬೇಕು. ಹಾಗೆ ಬದಲಾವಣೆ ಮಾಡದಿದ್ದರೆ ಹತ್ತಾರು ಕೋಟಿ ರೂಪಾಯಿಗಳು ಈಗ ಹೊಸದಾಗಿ ಬಂದಿರತಕ್ಕ ಭಾಗದ ಕಡೆಗೆ ಹರಿದುಹೋಗುತ್ತದೆ. ಶೇಕಡ 80 ರಷ್ಟು ವ್ಯವಸಾಯ ದಲ್ಲಿ ತೊಡಗಿರತಕ್ಕ ಹಳೇ ಮೈಸೂರು ಪ್ರದೇಶದ ಜನರಿಗೆ ಇದರಿಂದ ಬಹಳ ಅನ್ಯಾಯವಾಗುತ್ತದೆ. ಇದನ್ನು ಬದಲಾವಣೆ ಮಾಡದಿದ್ದರೆ ನಮ್ಮ ಭಾಗದ ಜನಕ್ಕೇನೂ ಅನುಕೂಲವಾಗುವುದಿಲ್ಲ. ಇದನ್ನು ಸರ್ಕಾರದವರು ಕೂಡಲೆ ಬದಲಾವಣೆ ಮಾಡದಿದ್ದರೆ ಮುಂದೆ ಇದರಿಂದ ದೊಡ್ಡ ಬೆಂಕಿ ಹತ್ತುತ್ತದೆ. ಆಗ ಇದನ್ನು ಆರಿಸುವುದಕ್ಕೆ ಬಹಳ ಕಷ್ಟವಾಗುತ್ತದೆ.

ಸ್ವಾಮಿ, ಇನ್ನು ತಾಲ್ಲೂಕ್ ಮಾರ್ಕೆಟಿಂಗ್ ಸೊಸೈಟಿಗಳಿಗೆ ಸರ್ಕಾರದವರು ಸಬ್‌ವೆನ್‌ಷನ್ ಮೂಲಕ ಹಾಗೂ ಸಾಲದ ರೂಪದಲ್ಲಿ ಬಹಳ ಹಣವನ್ನು ಕೊಡುತ್ತಿದ್ದಾರೆ. ಈ ಹಣ ಮತ್ತು ಬೇರೆ

(ಶ್ರೀ ವಿ. ಎಲ್. ಶಿವಪ್ಪ)

ಬ್ಯಾಂಕುಗಳಲ್ಲಿ ಸಾಲಮಾಡಿದ ಹಣ ಮತ್ತು ಸ್ಟೇಟ್ ಮಾರ್ಕೆಟಿಂಗ್ ಸೊಸೈಟಿಯಿಂದ ಗೊಬ್ಬರವನ್ನು ತಂದು ಅದನ್ನು ವ್ಯಾಪಾರ ಮಾಡಿ ಅದರಿಂದ ಬಂದ ಹಣ ಇಷ್ಟೆಲ್ಲವನ್ನೂ ಅವು ಹಾಳು ಮಾಡಿವೆ. ಹೀಗೆ ದೇಶದಲ್ಲಿ ಕೋಟಿಗಟ್ಟಲೆ ಹಣ ಹಾಳಾಗುತ್ತಿದೆ. ಸರ್ಕಾರದವರು ಅತ್ತಕಡೆಗೆ ತಮ್ಮ ಗಮನವನ್ನೇ ಕೊಡುತ್ತಿಲ್ಲ. ರಾಜ್ಯದಲ್ಲಿ ಎಲ್ಲೆಲ್ಲಿ ಕಾಂಗ್ರೆಸ್‌ನವರು ಈ ಸಹಕಾರ ಸಂಸ್ಥೆಗಳನ್ನು ನಡೆಸುತ್ತಿದ್ದಾರೆ ಅಂಥ ಕಡೆ ಅಲ್ಲಿ ಲಕ್ಷಗಟ್ಟಲೆ ಹಣ ದುರುಪಯೋಗವಾಗಿದ್ದರೂ ಅದನ್ನು ಕಣ್ಣುಬಿಟ್ಟು ನೋಡುತ್ತಿಲ್ಲ, ಆ ಬಗ್ಗೆ ವಿಚಾರಣೆ ಕೂಡ ನಡೆಸುತ್ತಿಲ್ಲ. ಇನ್ನು ರಾಜ್ಯದಲ್ಲಿ ಎಲ್ಲೆಲ್ಲಿ ಈ ಸಹಕಾರ ಸಂಸ್ಥೆಗಳನ್ನು ಕಾಂಗ್ರೆಸ್ಸೇತರರು ನಡೆಸುತ್ತಿದ್ದಾರೋ ಅಂಥ ಕಡೆಗಳಲ್ಲಿ ಆಡಳಿತ ಚೆನ್ನಾಗಿದ್ದರೂ ಅವುಗಳನ್ನು ಮುಂದುವರಿಯುವುದಕ್ಕೆ ಬಿಡುವುದಿಲ್ಲ. ನಾನೇ ಒಂದು ಸೊಸೈಟಿಗೆ ಅಧ್ಯಕ್ಷನಾಗಿ ಕೆಲಸಮಾಡುತ್ತಿದ್ದೆ. ಅಲ್ಲಿ ಒಂದು ವರ್ಷದಲ್ಲಿ ಒಂದು ಲಕ್ಷ ಇಪ್ಪತ್ತೈದು ಸಾವಿರ ರೂಪಾಯಿಗಳ ನಫೆಯಲ್ಲಿ ಸುಮಾರು 85 ಸಾವಿರ ರೂಪಾಯಿಗಳ ನಿವ್ವಳ ನಫೆಯನ್ನು ನಮ್ಮ ಸಹಕಾರ ಸಂಸ್ಥೆ ಗಳಿಸಿತು. ಅದು ಅಷ್ಟು ಚೆನ್ನಾಗಿ ನಡೆಯುತ್ತಿದ್ದರೂ ಸರ್ಕಾರದವರು ಜನರ ಹೇಳಿಕೆ ಮಾತುಗಳನ್ನು ಕೇಳಿ ನಮಗೆ ಬಹಳ ಕಿರುಕುಳ ಕೊಟ್ಟರು. ಸ್ಪೆಷಲ್ ಆಡಿಟರ್‌ಮೇಲೆ ಸ್ಪೆಷಲ್ ಆಡಿಟರನ್ನು ಕಳುಹಿಸಿಕೊಟ್ಟರು. ಆದರೇನೂ ಅಲ್ಲಿ ತಪ್ಪುಗಳನ್ನು ಕಂಡುಹಿಡಿಯುವುದಕ್ಕಾಗಲಿಲ್ಲ; ಅಲ್ಲಿ ತಪ್ಪುಗಳನ್ನು ಮಾಡಿದ್ದರಲ್ಲವೆ ಅವರು ಕಂಡುಹಿಡಿಯುವುದು? ಹೀಗೆ ಯೋಗ್ಯವಾಗಿ ಕೆಲಸಮಾಡತಕ್ಕ ಸಂಸ್ಥೆಗಳಿಗೆ ಕಿರುಕುಳವನ್ನು ಕೊಟ್ಟರೆ ಅವುಗಳು ಕೆಲಸ ಮಾಡುವುದಾದರೂ ಹೇಗೆ? ಲಕ್ಷಗಟ್ಟಲೆ ಹಣವನ್ನು ಪೋಲುಮಾಡತಕ್ಕ ಸಂಸ್ಥೆಗಳ ಕಡೆಗೆ ಇವರು ತಿರುಗಿ ನೋಡುವುದಿಲ್ಲ. ಚೆನ್ನಾಗಿ ಯೋಗ್ಯವಾಗಿ ಕೆಲಸಮಾಡತಕ್ಕ ಸಂಸ್ಥೆಗಳನ್ನು ಕೆಲಸಮಾಡುವುದಕ್ಕೆ ಬಿಡುವುದಿಲ್ಲ. ಅಂತೂ ಒಟ್ಟಿನಲ್ಲಿ ಈ ಸಹಕಾರ ಬಾಬು ಹಾಳಾಗುತ್ತಿದೆ. ಇದರಿಂದ ಕೋಟ್ಯಾಂತರ ರೂಪಾಯಿಗಳು ಸರ್ಕಾರಕ್ಕೆ ನಷ್ಟವಾಗುತ್ತಿದೆ. ಈ ಸಂಸ್ಥೆಗಳ ಆಡಿಟ್ಟಿಗಾಗಿ ನೇಮಕ ಮಾಡಿಕೊಂಡಿರುವ ಸ್ಪೆಷಲ್ ಸೆಲ್‌ಗಳ ಬಗ್ಗೆ ನಾನು ಒಂದು ಪ್ರಶ್ನಾವಳಿ ಸಹಾ ಕಳುಹಿಸಿಕೊಟ್ಟಿದ್ದೆ. ಈ ಆಡಿಟ್ ಬಾಬಿನಲ್ಲೂ ಕೂಡ ಬಹಳ ಅನ್ಯಾಯಗಳು ನಡೆಯುತ್ತಿವೆ. ಬಡಜನರಿಂದ ಕಷ್ಟಪಟ್ಟು ಸಂಪಾದಿಸಿದ ಹಣವನ್ನು ಸರ್ಕಾರದವರು ತೆರಿಗೆಯ ರೂಪದಲ್ಲಿ ವಸೂಲ್ಮಾಡಿಕೊಂಡು ತಂದ ಹಣವನ್ನು ಹೀಗೆ ಪೋಲು ಮಾಡುವುದಕ್ಕೆ ಅವಕಾಶ ಕೊಡಬಾರದು. ತಪ್ಪಿತಸ್ಥರು ಅವರು ಯಾರೇ ಆಗಿರಲಿ, ಸರ್ಕಾರದವರು ಅವರ ಬಗ್ಗೆ ಉಗ್ರಕಾರ್ಯಕ್ರಮಗಳನ್ನು ಕೈಗೊಳ್ಳದಿದ್ದರೆ ಈ ಸಹಕಾರ ಸಂಸ್ಥೆಗಳೆಲ್ಲಾ ಹಾಳಾಗಿಹೋಗುತ್ತವೆ. ಇವು ಇರಲೇಬೇಕು ಅನ್ನುವುದಾದರೆ ಇವುಗಳನ್ನು ಅಡ್ಮಿನಿಸ್ಟ್ರೇಷನ್ ಸರಿಯಾಗಿ ಮಾಡಿ, ಇಲ್ಲವೇ ಇವುಗಳನ್ನು ಕೂಡಲೆ ಮುಚ್ಚಿಬಿಡಿ ಎಂದು ಹೇಳುತ್ತೇನೆ. ಈ ಸಹಕಾರ ಇಲಾಖೆಯಲ್ಲಾದರೂ ಇರತಕ್ಕ ಅಧಿಕಾರಿಗಳ ಸಂಖ್ಯೆ ಎಷ್ಟು? ಅದಕ್ಕೆ ಕೊನೆಮೊದಲಿದ್ದ ಹಾಗೆ ಕಾಣುವುದಿಲ್ಲ. ಇಂಥ ಒಂದು ಅಧಿಕಾರಿಗಳ ಸೈನ್ಯವಾದರೂ ಏತಕ್ಕಿರಬೇಕು? ಹತ್ತು ವರ್ಷಗಳಾದರೂ ಜನರಲ್‌ಬಾಡಿ ನಡೆಸದೆ ಇರತಕ್ಕಂಥ ಸಂಸ್ಥೆಗಳು ರಾಜ್ಯದಲ್ಲಿ ಅನೇಕ ಇರುತ್ತವೆ. ಇಂಥ ಸಂಸ್ಥೆಗಳಲ್ಲಿ ಹಾಳಾಗತಕ್ಕ ಹಣ ಅಷ್ಟಿಷ್ಟಲ್ಲ. ಹೀಗೆ ದೇಶದ ಹಣ ಪೋಲಾಗುತ್ತಿದ್ದರೆ ಇವರು ಸಮಾಜವಾದ ಸಮಾಜವನ್ನು ಜಾರಿಗೆ ತರುವುದು ಎಂದು? ಇದರಿಂದ ಜನಗಳಿಗೆ ಅನುಕೂಲವಾಗುವುದಿಲ್ಲ. ಸರ್ಕಾರ ದುಷ್ಟಪದ್ಧತಿಯನ್ನು ಬೆಳೆಸಿದಂತಾಗುತ್ತದೆ. ಇದರ ಬಗ್ಗೆ ಸರಿಯಾದ ಕ್ರಮವನ್ನು ತೆಗೆದುಕೊಳ್ಳದೇ ಹೋದರೆ, ಇಡೀ ದೇಶವೇ ಹಾಳಾಗುತ್ತದೆ. ಕೋಆಪರೇಟಿವ್ ಪದ್ಧತಿಯನ್ನು ಸರಿಯಾಗಿ ಆರ್ಗನೈಜ್ ಮಾಡದಿದ್ದರೆ ಬಹಳ ಅನ್ಯಾಯಗಳು ಆಗುತ್ತವೆ. ದೇಶದ ಕಲ್ಯಾಣಕ್ಕೋಸ್ಕರ ಸಮಾಜವಾದವನ್ನು ತರಬೇಕೆಂಬ ಆಶೆ ಇದ್ದರೆ, ಅದಕ್ಕಾಗಿ ಯಾವುದು ಮಾಡಿದರೆ ಸಾಧ್ಯವಾಗುತ್ತದೆಂದು ಯೋಚಿಸಿ ಮಾಡಬೇಕು. ಅದರಲ್ಲಿ ನಂಬಿಕೆ ಇರುವವರ ಪೈಕಿ ನಾನೂ ಒಬ್ಬ. ಈಗ ಇರತಕ್ಕ ಕೋಆಪರೇಟಿವ್ ಡಿಪಾರ್ಟ್‌ಮೆಂಟಿನಲ್ಲಿ ಸರಿಯಾಗಿ ಕೆಲಸಕಾರ್ಯಗಳು ಆಗುತ್ತಾ ಇಲ್ಲ. ಮಾನ್ಯ ಶ್ರೀ ರಾಮಕೃಷ್ಣ ಹೆಗಡೆಯವರು ಹಿಂದೆ ಸಹಕಾರ ಸಚಿವರಾಗಿದ್ದರು. ಈಗ ಹಣಕಾಸಿನ ಸಚಿವರಾಗಿದ್ದಾರೆ. ಆದ್ದರಿಂದ ಹಣಕಾಸಿನ ಸಚಿವರಾಗಿರುವವರು ಈ ಕೋಆಪರೇಟಿವ್ ಡಿಪಾರ್ಟ್‌ಮೆಂಟ್ ಏನಿದೆ ಅದನ್ನು ಅವರೇ ವಹಿಸಿಕೊಂಡರೆ ದೇಶದಲ್ಲಿ ಬಹಳವಾಗಿ ಅಭಿವೃದ್ಧಿ ಕಾರ್ಯಗಳು ಆಗುತ್ತವೆ. ಜನರಿಗೂ ಹೆಚ್ಚಿಗೆ ಅನುಕೂಲವಾಗುತ್ತದೆ. ಏಕೆಂದರೆ ಸರ್ಕಾರದವರು ಕೊಡತಕ್ಕ ಹಣದಲ್ಲಿ ಶೇಕಡ 10 ರಷ್ಟು ಕೂಡ ಉಪಯೋಗವಾಗುತ್ತಾ ಇಲ್ಲ. ಆದ್ದರಿಂದ ಇದರ ಬಗ್ಗೆ ಸರ್ಕಾರದವರು ಒಳ್ಳೆಯ ವ್ಯವಸ್ಥೆಯನ್ನು ಮಾಡಬೇಕೆಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ವಾಟಾಳ್ ನಾಗರಾಜ್ (ಚಿಕ್ಕಪೇಟೆ).—ಅಧ್ಯಕ್ಷರೇ, ಮಾನ್ಯ ಶ್ರೀ ರಾಮಕೃಷ್ಣ ಹೆಗಡೆಯವರ ಬಗ್ಗೆ ವೈಯಕ್ತಿಕವಾಗಿ ನನಗೂ ವಿಶ್ವಾಸ ಇದೆ. ನಾನು ಈಗ ಯಾವ ವಿಷಯದ ಬಗ್ಗೆಯೂ ಜಾಸ್ತಿ ಕಾಲಾವಕಾಶವನ್ನು ತೆಗೆದುಕೊಳ್ಳುವುದಿಲ್ಲ. ನಾವು ಮತ್ತು ಶ್ರೀಮಾನ್

ರಾಮಕೃಷ್ಣ ಹೆಗಡೆಯವರು ಹಾಗೂ ಈ ದೇಶದ ಜನ ಈ ವರ್ಷ ಗಾಂಧಿ ಶತಮಾನೋತ್ಸವ ವರ್ಷವೆಂದು ತೀರ್ಮಾನ ಮಾಡಿಕೊಂಡು ಈ ವರ್ಷದೊಳಗೆ ಅವರ ಉತ್ಸವವನ್ನು ಆಚರಣೆ ಮಾಡುತ್ತಿದ್ದೇವೆಂದು ಇಲ್ಲಿ ಒಂದು ಕಡೆ ತೋರಿಸಿದ್ದಾರೆ. ಇಲ್ಲಿ ರಾಜ್ಯಪಾಲರಿಗೆ ಒಂದು ರಾಜಭವನ ಇದೆ. ಅದು ಒಂದು ದೊಡ್ಡ ಬಿಳೀ ಆನೆಯ ಹಾಗೆ ಇದೆ. ಇವರು ರಾಜಭವನಕ್ಕಾಗಿ ಖರ್ಚು ಮಾಡಿರುವುದನ್ನು ನೋಡಿದರೆ, ಅದು ಒಂದು ಪ್ರಜಾತಂತ್ರವೆಂದು ನಾನು ಹೇಳುತ್ತೇನೆ. ಮಾನ್ಯ ಶ್ರೀ ರಾಮಕೃಷ್ಣ ಹೆಗಡೆಯವರು ಸ್ವಲ್ಪ ಮಹಾತ್ಮ ಗಾಂಧಿಯವರ ಫೋಟೋ ಕಡೆ ತಿರುಗಿ ಅವರು ಹಾಕಿಕೊಂಡಿರತಕ್ಕ ಬಟ್ಟೆಯನ್ನು ನೋಡಲಿ. ಮಹಾತ್ಮ ಗಾಂಧಿಯವರನ್ನು ತಾವು ಮರೆತಿದ್ದೀರೆಂದು ನನಗೆ ಕಾಣುತ್ತದೆ. ರಾಜಭವನದಲ್ಲಿ ಯಾವುದೋ ಒಂದು ಮಹಡಿಯ ರಿಪೇರಿ ಮಾಡುವುದಕ್ಕೋಸ್ಕರ ಲಕ್ಷಾಂತರ ರೂಪಾಯಿಗಳನ್ನು ಖರ್ಚುಮಾಡುತ್ತಿದ್ದೀರಿ. ಇಂತಹ ಅನ್ಯಾಯ ಆಗಬಾರದು. ನೀವು ಈ ರೀತಿ ಮಾಡುತ್ತೀರೆಂದು ನಾನು ಕಂಡಿರಲಿಲ್ಲ. ಹೋಗುತ್ತಾ ಹೋಗುತ್ತಾ ಕಾಲಕ್ಕೆ ತಕ್ಕಂತೆ ಬದಲಾವಣೆಯಾಗಬೇಕು. ಗಾಂಧಿ ಶತಮಾನೋತ್ಸವದಲ್ಲಿ ಗಾಂಧಿಯವರು ಹಾಕಿದಂಥ ಹಾದಿಯನ್ನು ತಾವು ಮರೆತು ನಾವು ಆಡಳಿತ ಪಕ್ಷದವರು ಮತ್ತು ಕಾಂಗ್ರೆಸ್ ಪಕ್ಷದವರು ಎಂಬುದಾಗಿ ತಿಳಿದು ಲಕ್ಷಾಂತರ ರೂಪಾಯಿಗಳನ್ನು ಈ ಒಂದು ರಾಜಭವನದ ರಿಪೇರಿಗಾಗಿ ಖರ್ಚುಮಾಡುತ್ತಿದ್ದೀರಿ. ಆದರೆ ಇವತ್ತು ತುಕೋಳ್ ಕಮಿಷನ್ನಿನ ವರದಿಯನ್ನು ಇಂಪ್ಲಿಮೆಂಟ್ ಮಾಡಿ ಅಂದರೆ ಅದು ಆಗುವುದಿಲ್ಲವೆಂದು ಹೇಳುತ್ತೀರಿ. ರಾಜಭವನದ ರಿಪೇರಿಗೋಸ್ಕರ ಲಕ್ಷಾಂತರ ರೂಪಾಯಿಗಳನ್ನು ಖರ್ಚು ಮಾಡುತ್ತೀರಿ. ಇದರಿಂದ ನಾನು ಒಂದು ಮಾತನ್ನು ಹೇಳುವುದಾದರೆ ಮಂತ್ರಿಗಳಿಗೆ ಭೋಗಭವನ, ಅಧಿಕಾರಿಗಳಿಗೆ ಯೋಗಭವನ, ಜನತೆಗೆ ನರಕಭವನ ಮತ್ತೆ ರಾಜ್ಯಪಾಲರಿಗೆ ಈ ಗಾಂಧಿ ಶತಮಾನೋತ್ಸವದಲ್ಲಿ ರಾಜಭವನ ಆಗಿದೆ.

ಶ್ರೀ ರಾಮಕೃಷ್ಣ ಹೆಗಡೆ.—ಸದಸ್ಯರುಗಳಿಗೆ ಯಾವ ಭವನ ?

ಶ್ರೀ ವಾಟಾಳ್ ನಾಗರಾಜ್.—ಸದಸ್ಯರುಗಳಿಗೆ ಬೀದಿಭವನ.

ಒಬ್ಬ ಮಾನ್ಯ ಸದಸ್ಯರು.—ಶಾಸಕರ ಭವನವೆಂದು ಇದೆಯಲ್ಲಾ.

ಶ್ರೀ ವಾಟಾಳ್ ನಾಗರಾಜ್.—ಅದು ಶಾಸಕರ ಭವನವೇ, ಅದು ಟೂರಿಸ್ಟ್ ಹೋಟಲ್ ಇದ್ದ ಹಾಗೆ ಇದೆ. ಅಲ್ಲಿ ಶಾಸಕರು ಯಾರೋ ಶಾಸಕರಲ್ಲದವರು ಯಾರೋ ಏನೂ ಗೊತ್ತಾಗುವುದಿಲ್ಲ. ಯಾರಾದರೂ ನಮ್ಮ ರಾಜ್ಯಕ್ಕೆ ಬಂದರೆ, ಅವರು ಅಲ್ಲಿಯೇ ಇರುವುದು ಶಾಸಕರ ಭವನದ ಗೌರವ ಈಗಾಗಲೇ ಹೋಗಿದೆ. ಆ ಭವನ ನೋಡಿ ಅದರ ಮುಂದೆ ನಿಂತು ನಾವು ತಲೆ ಚಚ್ಚಿಕೊಳ್ಳಬೇಕು.

3–00 P.M.

ಇದು ಒಳ್ಳೆಯದಲ್ಲ. ನೀವು ಇವತ್ತಿನ ದಿವಸ ದೇಶದಲ್ಲಿ ಒಂದು ಸನ್ಮಾರ್ಗದಲ್ಲಿ ಹೋಗಬೇಕು ದೇಶದಲ್ಲಿ ಸತ್ಯವಾದ ಆಡಳಿತವನ್ನು ನಡೆಸಬೇಕು ಎನ್ನುವಂತದನ್ನು ಮರೆತಿದ್ದೀರಿ. ಇವತ್ತಿನ ದಿವಸ ಬಡ ನೌಕರರು ಎಷ್ಟು ಹೋರಾಟವನ್ನು ನಡೆಸಿದರೂ ಕೂಡ ಅವರ ಬಗ್ಗೆ, ಅವರ ಬೇಡಿಕೆಗಳ ಬಗ್ಗೆ ಯಾವುದನ್ನೂ ಮಾಡುತ್ತಾ ಇಲ್ಲ. ಇವತ್ತು ನೀವು ಲಕ್ಷಾಂತರ ರೂಪಾಯಿ ಖರ್ಚು ಮಾಡುತ್ತಿದ್ದೀರಿ. ಮೊನ್ನೆ ಮುದ್ರಣ ಕೆಲಸಗಾರರ ಸಂಘದವರು ಸತ್ಯಾಗ್ರಹ ಮಾಡಿದರು. ಅವರಿಗೆ ಸರ್ಕಾರದವರು ಕೊಟ್ಟಿರತಕ್ಕ ಬಟ್ಟೆ ನೋಡಿದರೆ, ಹೇಸಿಕೆಯಾಗುತ್ತದೆ. ಇವತ್ತು ರಾಜಭವನದ ರಿಪೇರಿಗೆ, ಕೇವಲ ಸುಣ್ಣ ಹೊಡೆಸುವುದಕ್ಕೆ ಲಕ್ಷಾಂತರ ರೂಪಾಯಿ ಖರ್ಚು ಮಾಡುತ್ತಿದ್ದೀರಿ. ಆದರೆ ಇಂತಹ ನಿಮ್ಮ ನೌಕರರಿಗೆ ಒಂದು ಒಳ್ಳೆಯ ಬಟ್ಟೆ ಕೊಡುವುದಕ್ಕೆ ನಿಮಗೆ ಯೋಗ್ಯತೆ ಇಲ್ಲ. ಮುದ್ರಣಕಾರರ ಸಂಘದವರು ಆ ಬಟ್ಟೆಯನ್ನು ನನಗೆ ಕಳಿಸಿದ್ದಾರೆ. ನೋಡಿ ಇಲ್ಲಿದೆ ಆ ಬಟ್ಟೆ ಇದನ್ನು ಹಾಕಿಕೊಂಡರೆ ನಾಯಿಗಳು ಅಟ್ಟಿಸಿಕೊಂಡು ಬರುತ್ತಿವೆಯಂತೆ. ಇದು ಹರಿಶ್ಚಂದ್ರ ಘಾಟಿಗೆ ಹೋಗುವಾಗ ಹೆಣಕ್ಕೆ ಹಾಕುವಂತ ಬಟ್ಟೆಯಾಗಿದೆ. ಸಾಮಾನ್ಯ ಬಡನೌಕರರು ವರ್ಷಗಟ್ಟಲೆಯಿಂದ ಇದನ್ನು ಕೇಳುತ್ತಿದ್ದಾರೆ. ಇವತ್ತು ಈ ವಿಚಾರಗಳನ್ನು ನೀವು ಗಮನಕ್ಕೇನೆ ತೆಗೆದುಕೊಳ್ಳುವುದಿಲ್ಲ ? ಆದರೆ, ನಿಮ್ಮ ರಾಜಭವನಕ್ಕೆ ಏನು ಸಿಂಗಾರ ? ಅದು ಪ್ರಜಾಪ್ರಭುತ್ವದ ಸುಂದರಿ. ಆದಕ್ಕೆ ಸಿಂಗಾರ ಮಾಡುತ್ತಿದ್ದೀರಿ-ಸ್ನೋ ಪೌಡರ್ ಹಾಕಿದ ಹಾಗೆ. ನಿಮಗೆ ನಿಜವಾಗಿಯೂ ದೇಶವನ್ನು ಧರ್ಮದ ತಳಹದಿಯಲ್ಲಿ, ನಡೆಸಿಕೊಂಡು ಹೋಗಬೇಕೆನ್ನುವ ದೃಷ್ಟಿ ಇರುವುದಾದರೆ, ಈ ಯೋಗ, ಭೋಗ, ಸೌಲಭ್ಯಗಳನ್ನು ನಿಲ್ಲಿಸಿ, ಮಹಾತ್ಮಾ ಗಾಂಧೀಜಿಯವರು, ಯಾವ ರೀತಿ ಹೋದರು, ಆ ರೀತಿ ನಡೆಸಿಕೊಂಡು ಹೋಗಿ. ನನಗೆ ಅನಿಸುತ್ತದೆ, ಅವರು ಬದುಕಿದ್ದರೆ, ಅವರು ಖಂಡಿತವಾಗಿಯೂ ಸತ್ಯಾಗ್ರಹ ಮಾಡಿ ಅಸು ನೀಗುತ್ತಿದ್ದರು. ಇವತ್ತಿನ ದಿವಸ ಬಹಳ ಕಠಿಣವಾದಂತಹ ಪರಿಸ್ಥಿತಿಗೆ ಬಂದಿದ್ದೀರಿ. ಒಂದು ಕಡೆ ಲೆಕ್ಕವಿಲ್ಲದಂತೆ ಎಲ್ಲಾ ಹೋಗುತ್ತಿದೆ. ಶ್ರೀಮಾನ್ ಬಿ. ವಿ. ಹಳ್ಳಿಕೇರಿ

(ಶ್ರೀ ವಾಟಾಳ್ ನಾಗರಾಜ್)

ಯಾರು ಖಾದಿ ಬೋರ್ಡಿನ ಅಧ್ಯಕ್ಷರಾಗಿದ್ದಾಗ ಲಕ್ಷಾಂತರ ರೂಪಾಯಿ ಲೆಕ್ಕವಿಲ್ಲದಾಗಿದೆ. ಇವತ್ತು ಬೇಕಾದವರಿಗೆ ಒಂದು ರೀತಿ, ಬೇಡವಾದವರಿಗೆ ಇನ್ನೊಂದು ರೀತಿ ಮಾಡುತ್ತಿದ್ದೀರಿ. ಆಗ ಅದಂತಹ ದುರಂತ, ಅಕ್ರಮ, ಕರ್ಮಕಾಂಡ ಏನಾಯಿತು !

ಅಲ್ಲಿ ಹಳೆಯ ಲೆಕ್ಕವನ್ನು ಬಿಟ್ಟು ಹೊಸ ಲೆಕ್ಕವನ್ನು ಪ್ರಾರಂಭ ಮಾಡಿದ್ದಾರೆ. ಲಕ್ಷಾಂತರ ರೂಪಾಯಿಗಳನ್ನು ಖರ್ಚು ಮಾಡಿದ್ದಾರೆ. ಮಂತ್ರಿಗಳನ್ನು ಹಿಡಿಯುವಕಾಲ ಬರುತ್ತದೆ. ಅವರನ್ನು ಬಿಡಿಸಿಕೊಳ್ಳುವುದಕ್ಕೆ ಕೈಮುಗಿದು ಕೇಳಿಕೊಂಡರೂ ಅವರನ್ನು ಬಿಡಿಸಿಕೊಂಡು ಹೋಗುವುದಕ್ಕೆ ಸಾಧ್ಯವಿಲ್ಲದೇ ಇರುವ ಕಾಲ ಬರುತ್ತದೆ. ಪ್ರಜಾಪ್ರಭುತ್ವದಲ್ಲಿ ಏನೇನೋ ನಡೆಯುತ್ತದೆ. ಜನತಾ ರಾಜ್ಯದಲ್ಲಿ ಯಾರಿಗೂ ಯಾವುದೂ ಶಾಶ್ವತ ಇಲ್ಲ. ಈಗ ನಮ್ಮಲ್ಲಿ ಇಂಡಿಕೇಟ್ ಮತ್ತು ಸಿಂಡಿಕೇಟ್ ಬೇರೆ ಹುಟ್ಟಿಕೊಂಡಿವೆ. ಅದರಲ್ಲಿ ಯಾರು ಯಾರು ಯಾವ ಕಡೆ ಇದ್ದಾರೆ ಎಂಬುದು ಗೊತ್ತಾಗುವುದಿಲ್ಲ. ಒಟ್ಟಿನಲ್ಲಿ ದೇಶದ ಅಭಿವೃದ್ಧಿಯ ಕಡೆ ಗಮನ ಕೊಟ್ಟು ಕೆಲಸ ಮಾಡಬೇಕು. ಅವರು ಹೇಳಿದ್ದು ಮಾಡುತ್ತೇವೆ, ಇವರು ಹೇಳಿದ್ದು ಮಾಡುತ್ತೇವೆ ಎಂದು ಹೇಳುವುದು ಸರಿಯಲ್ಲ. ಮಾಡತಕ್ಕ ಕೆಲಸವನ್ನು ಸರಿಯಾಗಿ ಮಾಡದೆ ಸರ್ಕಾರದವರು ತಮ್ಮ ಮನಸ್ಸಿಗೆ ಬಂದಹಾಗೆ ಕೆಲಸವನ್ನು ಮಾಡುವುದಾದರೆ ಅದನ್ನು ಪ್ರತಿಭಟನೆ ಮಾಡತಕ್ಕ ಕಾಲ ಸನ್ನಿಹಿತವಾಗುತ್ತದೆ ಎಂದು ಹೇಳಿ ನಾನು ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಸಿ. ಎಂ. ಎಸ್. ಶಾಸ್ತ್ರಿ (ಚಿಕ್ಕಮಗಳೂರು).—ಸನ್ಮಾನ್ಯ ಸಭಾಧ್ಯಕ್ಷರೇ, ಈಗ ನಮ್ಮ ಮುಂದೆ ಇಟ್ಟಿರತಕ್ಕಂಥ ಸಪ್ಲಿಮೆಂಟರಿ ಡಿಮ್ಯಾಂಡಿನ ಬಗ್ಗೆ ಅದರಲ್ಲೂ ಕೂಡ ವ್ಯವಸಾಯ ಇಲಾಖೆಯ ಬೇಡಿಕೆಗಾಗಿ 1,53,34,475 ರೂಪಾಯಿಗಳ ಬೇಡಿಕೆಯನ್ನು ನಮ್ಮ ಮುಂದೆ ಇಟ್ಟಿದ್ದಾರೆ ಅದು ಯಾವ ರೀತಿ ವಿನಿಯೋಗವಾಗುತ್ತಿದೆ ಎನ್ನತಕ್ಕಂಥಾದ್ದನ್ನು ನಾವು ವಿಚಾರ ಮಾಡಬೇಕಾಗಿದೆ. ಇವೊತ್ತಿನ ದಿವಸ ವ್ಯವಸಾಯ ಇಲಾಖೆಗೆ ಸರ್ಕಾರದವರು ಏನು ಹಣವನ್ನು ಖರ್ಚು ಮಾಡುತ್ತಿದ್ದಾರೆಯೋ ಅದು ಸರಿಯಾದ ಮಾರ್ಗದಲ್ಲಿ ಖರ್ಚಾಗುತ್ತಿಲ್ಲ. ಯಾವ ಇಲಾಖೆ ಈ ಕೆಲಸವನ್ನು ಮಾಡಬೇಕೋ ಆ ಇಲಾಖೆ ಕೆಲಸವನ್ನು ಮಾಡದೆ ಎನ್.ಇ.ಎಸ್ ಇಲಾಖೆಯ ಮುಖಾಂತರ ಈ ಇಲಾಖೆಯ ಕೆಲಸಕಾರ್ಯಗಳು ನಡೆಯುತ್ತವೆ. ಇದರಲ್ಲಿ ಎಂದರೆ ಎನ್.ಇ.ಎಸ್ ಇಲಾಖೆಯಲ್ಲಿರತಕ್ಕ ವಿಲೇಜ್ ಲೆವೆಲ್ ವರ್ಕರುಗಳು ರೈತರಲ್ಲಿ ನೇರವಾದ ಸಂಪರ್ಕವನ್ನು ಇಟ್ಟುಕೊಂಡಿದ್ದಾರೆ. ಅವರು ಯಾವರೀತಿ ಹೊಸ ಬೆಳೆಗಳನ್ನು ಬೆಳೆಯಬೇಕು, ಯಾವ ಕಾಲದಲ್ಲಿ ಬೆಳೆಗೆ ಗೊಬ್ಬರ ಹಾಕಬೇಕು ಎನ್ನುವುದನ್ನು ರೈತರಿಗೆ ಈ ವಿಲೇಜ್ ಲೆವೆಲ್ ವರ್ಕರುಗಳು ಮಾರ್ಗದರ್ಶನ ಮಾಡಿಕೊಡುತ್ತಿದ್ದಾರೆ. ಈ ವಿಲೇಜ್ ಲೆವೆಲ್ ವರ್ಕರುಗಳು ಜಮೀನಿನಲ್ಲಿ ಯಾವರೀತಿ ಹೊಸ ಮಾದರಿಯಲ್ಲಿ ಬೆಳೆಯನ್ನು ಬೆಳೆಯಬೇಕು ಎನ್ನುವುದರ ಬಗ್ಗೆ ಅನುಭವ ಪಡೆದುಕೊಂಡಿರುವುದಿಲ್ಲ. ಈ ರೀತಿ ಅನುಭವವನ್ನು ಪಡೆದುಕೊಳ್ಳದೇ ಇರುವ ವಿಲೇಜ್ ಲೆವೆಲ್ ವರ್ಕರುಗಳು ರೈತರಿಗೆ ಕೊಡತಕ್ಕ ಸಲಹೆಯಿಂದ ಅಘಾತಗಳಾಗುತ್ತವೆ. ಇದು ಸರಿಯಲ್ಲ ಎಂದು ನಾನು ಹೇಳಬಯಸುತ್ತೇನೆ. ವ್ಯವಸಾಯ ಇಲಾಖೆಯಲ್ಲಿರತಕ್ಕ ತಜ್ಞರು ಏನಿದ್ದಾರೆ ಆ ತಜ್ಞರ ಮುಖಾಂತರ ರೈತರಿಗೆ ಇದ್ದಂಥಹ ನೇರವಾದ ಸಂಪರ್ಕವನ್ನು ತಪ್ಪಿಸಿದ್ದಾರೆ. ಇದರಿಂದಾಗಿ ಈಗ ವ್ಯವಸಾಯ ಇಲಾಖೆಯಲ್ಲಿರತಕ್ಕ ತಜ್ಞರು ಹೋಗಿ ರೈತರಿಗೆ ಸಲಹೆಯನ್ನು ಕೊಡುವುದಕ್ಕೆ ಆಗುವುದಿಲ್ಲ. ಆದ್ದರಿಂದ ಹಿಂದಿನ ರೀತಿಯಲ್ಲಿಯೇ ವ್ಯವಸಾಯ ಇಲಾಖೆಯ ತಜ್ಞರು ರೈತರಿಗೆ ಸಲಹೆಗಳನ್ನು ಕೊಡುವಂತೆ ವ್ಯವಸ್ಥೆ ಮಾಡಬೇಕು. ಎನ್.ಇ.ಎಸ್. ಇಲಾಖೆಯನ್ನು ಆದಷ್ಟು ಜಾಗ್ರತೆ ವಜಾಮಾಡಬೇಕು. ಈ ಎನ್.ಇ.ಎಸ್. ಇಲಾಖೆಗೆ ಖರ್ಚಾಗತಕ್ಕಂಥ ಕೋಟ್ಯಾಂತರ ರೂಪಾಯಿಗಳನ್ನು ಮಿಗಿಸಿ ಅದನ್ನು ವ್ಯವಸಾಯ ಇಲಾಖೆಗೆ ಖರ್ಚು ಮಾಡಿದರೆ ಅದರಿಂದ ರೈತರಿಗೆ ಅನುಕೂಲವಾಗುತ್ತದೆ ಎಂದು ನಾನು ತಿಳಿದುಕೊಂಡಿದ್ದೇನೆ. ಎನ್.ಇ.ಎಸ್. ಇಲಾಖೆಯಲ್ಲಿರತಕ್ಕ ವಾಹನಗಳು ರೈತರಿಗೆ ಉಪಯೋಗವಾಗುತ್ತಿಲ್ಲ. ಅಲ್ಲಿ ಕೆಲಸಮಾಡತಕ್ಕ ಅಧಿಕಾರಿಗಳ ಸ್ವಂತ ಕೆಲಸಕಾರ್ಯಗಳಿಗೋಸ್ಕರ ಈ ವಾಹನಗಳು ಉಪಯೋಗವಾಗುತ್ತವೆ. ಅದನ್ನು ತಪ್ಪಿಸಬೇಕು.

ವ್ಯವಸಾಯ ಇಲಾಖೆಯವರು ರೈತರ ಸಂಖ್ಯೆಗನುಗುಣವಾಗಿ ತಜ್ಞರ ಸಂಖ್ಯೆಯನ್ನು ಹೆಚ್ಚಿಸಿ ರೈತರಿಗೆ ತಜ್ಞರ ಸಂಪರ್ಕ ಹೆಚ್ಚು ಇರುವಂತೆ ಏರ್ಪಾಡು ಮಾಡಬೇಕು. ಇದರಿಂದ ರೈತರಿಗೆ ಒಳ್ಳೆಯ ಸಲಹೆ ಸಿಗುತ್ತದೆಂದು ತಿಳಿದುಕೊಂಡಿದ್ದೇನೆ. ಸರ್ಕಾರದವರು ರೈತರಿಗೆ ಒಳ್ಳೆಯ ಬೆಳೆ ಬೆಳೆಯಬೇಕಾದರೆ ಸುಧಾರಿಸಿದ ಬೀಜಗಳನ್ನು ಮತ್ತು ಒಳ್ಳೆಯ ಗೊಬ್ಬರವನ್ನು ಉಪಯೋಗಿಸಬೇಕೆಂದು ಹೇಳುತ್ತಿದ್ದಾರೆ. ಆದರೆ ರೈತರು ಇವುಗಳನ್ನು ಉಪಯೋಗ ಮಾಡುವ ಮೊದಲು ಅವರ

ಜಮೀನಿನ ಮಣ್ಣಿನ ಪರೀಕ್ಷೆ ನಡೆಯಬೇಕಾಗಿದೆ. ಎಲ್ಲಾ ಕಡೆಗಳಲ್ಲಿಯೂ ಮಣ್ಣಿನ ಪರೀಕ್ಷೆಯ ಕೇಂದ್ರಗಳನ್ನು ಇಡದಿರುವುದರಿಂದ ಈ ವಿಚಾರದಲ್ಲಿ ರೈತರಿಗೆ ಯಾವ ಅನುಕೂಲವೂ ಆಗುತ್ತಿಲ್ಲವೆಂದು ಹೇಳಬಹುದು. ಪ್ರತಿಯೊಂದು ಹೋಬಳಿಗೂ ಕೂಡ ಒಂದೊಂದು ಮಣ್ಣಿನ ಪರೀಕ್ಷೆಯ ಕೇಂದ್ರಗಳನ್ನು ನೇಮಕ ಮಾಡಿದರೆ ರೈತರಿಗೆ ಸರಿಯಾದ ಮಾರ್ಗದರ್ಶನ ಸಿಗುತ್ತದೆಂದು ತಿಳಿದುಕೊಂಡಿದ್ದೇನೆ. ಪ್ರತಿಯೊಂದು ಮಣ್ಣಿನ ಪರೀಕ್ಷೆಯ ಕೇಂದ್ರಗಳನ್ನು ಪ್ರತಿ ಹೋಬಳಿಗೂ ಮಂಜೂರು ಮಾಡಬೇಕು ಮತ್ತು ಪ್ರತಿ ಕೇಂದ್ರಕ್ಕೂ ಒಂದೊಂದು ಮೊಬೈಲ್ ವ್ಯಾನನ್ನು ಒದಗಿಸಬೇಕು ಆ ರೀತಿ ಒದಗಿಸಿದರೆ ಆ ವ್ಯಾನು ಎಲ್ಲಾ ಕಡೆಗೂ ಹೋಗಿ ಎಲ್ಲಾ ಜಮೀನಿನ ಮಣ್ಣನ್ನು ತೆಗೆದುಕೊಂಡು ಬಂದು ಪರೀಕ್ಷೆ ಮಾಡಿ ಸಂಬಂಧಪಟ್ಟ ರೈತರಿಗೆ ಸಲಹೆ ಕೊಡುವುದಕ್ಕೆ ಅನುಕೂಲವಾಗುತ್ತದೆಂದು ತಿಳಿದುಕೊಂಡಿದ್ದೇನೆ. ಅದೇ ರೀತಿ ಬೆಳೆಗಳಿಗೆ ರೋಗರುಜಿನಗಳು ಬರದಂತೆ ನೋಡಿಕೊಳ್ಳಬೇಕಾದುದು ಅತಿಮುಖ್ಯವಾದುದು. ಮೊದಲು ರೈತರು ತಮ್ಮ ಜಮೀನಿನಲ್ಲಿ ಬೆಳೆಗೆ ರೋಗ ಬಂದರೆ ಕ್ರಿಮಿನಾಶಕ ಔಷಧ ಕೊಳ್ಳಲು 50 ಭಾಗವನ್ನು ಸರ್ಕಾರದವರು ಸಬ್ಸಿಡಿ ರೂಪದಲ್ಲಿ ಕೊಡುತ್ತಿದ್ದರು. ಈಗ ಅದನ್ನು 25 ಪರ್‌ಸೆಂಟ್‌ಗೆ ಇಳಿಸಿದ್ದಾರೆ. ರೈತರು 75 ಭಾಗದ ಖರ್ಚನ್ನು ವಹಿಸಿಕೊಳ್ಳಬೇಕಾಗಿದೆ. ಇದು ಸರಿಯಲ್ಲ. ಮೊದಲಿನಂತೆ 50 ಪರ್‌ಸೆಂಟ್ ಸಬ್ಸಿಡಿ ಕೊಡುವುದನ್ನು ಜಾರಿಗೆ ತರಬೇಕು. ಮತ್ತು ಬೆಳೆಗೆ ರೋಗ ಬಂದಾಗ ಔಷಧವನ್ನು ಸ್ಪ್ರೇ ಮಾಡಲು ಒಂದು ಮೂವಿಂಗ್ ಸ್ಕ್ವಾಡನ್ನು ಇಡಬೇಕು. ಇದಕ್ಕೆ ಆಗುವ ಖರ್ಚಿನಲ್ಲಿ ಒಂದು ಭಾಗವನ್ನು ಬೇಕಾದರೆ ರೈತರಿಂದ ವಸೂಲಿ ಮಾಡಬಹುದು. ಈಗ ಹೈಬ್ರಿಡ್ ಬೀಜದ ವಿತರಣೆ ಸರಿಯಾಗಿ ಆಗುತ್ತಿಲ್ಲ. ಈಗ ಈ ಬೀಜಗಳನ್ನು ಸುಸಜ್ಜಿತ ಗೋಡೌನ್‌ಗಳಲ್ಲಿ ದಾಸ್ತಾನು ಇಟ್ಟು ಕಾಲಕ್ಕೆ ಸರಿಯಾಗಿ ರೈತರಿಗೆ ವಿತರಣೆ ಮಾಡುತ್ತಿಲ್ಲ. ಸರಿಯಾದ ಬೀಜಗಳನ್ನು ರೈತರಿಗೆ ವಿತರಣೆ ಮಾಡದುದರಿಂದ ಅವರು ಒಳ್ಳೆಯ ಬೆಳೆ ಬೆಳೆಯುವುದಕ್ಕೆ ಅವಕಾಶವಾಗಿಲ್ಲ. ಈ ಕಾರಣದಿಂದ ಹೈಬ್ರಿಡ್ ಬೀಜದ ಬಗ್ಗೆ ಇರುವ ನಂಬಿಕೆ ರೈತರಲ್ಲಿ ಹೊರಟು ಹೋಗುತ್ತಿದೆ. ಇನ್ನು ಮುಂದೆಯಾದರೂ ಕೂಡ ರೈತರಿಗೆ ಸರಿಯಾದ ಹೈಬ್ರಿಡ್ ಬೀಜಗಳನ್ನು ಒದಗಿಸುವುದಕ್ಕೆ ಏರ್ಪಾಡು ಮಾಡಬೇಕು. ಒಳ್ಳೆಯ ಗೊಬ್ಬರವನ್ನು ರೈತರಿಗೆ ಉಪಯೋಗ ಮಾಡಬೇಕು ಎಂದು ಸರ್ಕಾರದವರು ಪ್ರಚಾರ ಮಾಡುತ್ತಿದ್ದಾರೆ. ಆದರೆ ಇವತ್ತಿನ ದಿವಸ ಒಂದು ಟನ್ ಗೊಬ್ಬರದ ಬೆಲೆ 500ರಿಂದ 600 ರೂಪಾಯಿಗಳವರೆಗೆ ಇರುವುದರಿಂದ ರೈತರು ಗೊಬ್ಬರವನ್ನು ಮುಟ್ಟುವ ಸ್ಥಿತಿಯಲ್ಲಿ ಇಲ್ಲ. ಗೊಬ್ಬರದ ಬೆಲೆ ದಿನೇ ದಿನೇ ಜಾಸ್ತಿಯಾಗುತ್ತಿದೆ. ಇದಕ್ಕೆ ಕಾರಣ ಈಚೆಗೆ ಶೇಕಡಾ ಹತ್ತರಷ್ಟು ಜಾಸ್ತಿ ಎಕ್ಸೈಸ್ ಡ್ಯೂಟಿ ಹಾಕಿದುದರಿಂದ ಹೀಗಾಗಿದೆ. ಇದರಿಂದ ಬಡ ರೈತ ಗೊಬ್ಬರವನ್ನು ಕೊಂಡು ಉಪಯೋಗಿಸಲು ಆಗುತ್ತಿಲ್ಲ. ಈಗಿರತಕ್ಕ ಗೊಬ್ಬರದ ಬೆಲೆಯನ್ನು ಕಡಿಮೆ ಮಾಡಬೇಕು. ಇಲ್ಲದೆ ಇದ್ದರೆ ಬಡ ರೈತ ಉಪಯೋಗ ಮಾಡಲಾಗುವುದಿಲ್ಲ. ಈಗ ಕಡಿಮೆ ಬೆಲೆಯಲ್ಲಿ ಗೊಬ್ಬರ ಬಡ ರೈತರಿಗೆ ಎಲ್ಲೂ ಸಿಗುತ್ತಿಲ್ಲ. ರಾಜ್ಯದಲ್ಲಿ ಎಲ್ಲ ಕಡೆಗಳಲ್ಲಿರುವ ಸೊಸೈಟಿಗಳಲ್ಲಿ ಬೇಕಾದಷ್ಟು ಗೊಬ್ಬರದ ಸ್ಟಾಕ್ ಇದೆ. ಇದನ್ನು ಸೊಸೈಟಿಗಳವರು ಹಾಗೂ ವ್ಯವಸಾಯ ಇಲಾಖೆಯವರು ಎಲ್ಲ ರೈತರು ತೆಗೆದುಕೊಳ್ಳಬೇಕೆಂದು ಹೇಳುತ್ತಾರೆ. ಆದರೆ ಈಗ ಗೊಬ್ಬರದ ಬೆಲೆ ಜಾಸ್ತಿಯಾಗಿದೆ. ಇದರ ಬೆಲೆ ಒಂದು ಟನ್ನಿಗೆ 200 ರೂಪಾಯಿಗಳಂತೆಯಾದರೂ ನಿಗದಿ ಮಾಡಿದರೆ ಆಗ ರೈತರು ಕೊಳ್ಳಬಹುದು ಮತ್ತು ತಮ್ಮ ಜಮೀನಿಗೆ ಉಪಯೋಗಿಸಿಕೊಳ್ಳಬಹುದು. ಇಲ್ಲದೇ ಇದ್ದರೆ ಸಾಧ್ಯವಿಲ್ಲ. ಈಗ ರಾಜ್ಯದಲ್ಲಿ ಕೋಟ್ಯಾಂತರ ರೂಪಾಯಿಗಳಷ್ಟು ಬೆಲೆಯ ಗೊಬ್ಬರ ಖರ್ಚಾಗದೆ ಕೊಳೆಯುತ್ತಿದೆ. ಇದು ಖರ್ಚಾಗದೇ ಇರಲು ಕಾರಣ ಇದರ ಬೆಲೆ ಬಹಳ ಹೆಚ್ಚಾಗಿರುವುದರಿಂದ. ಇದಕ್ಕಾಗಿ ಸರಕಾರ ಮುಂದೆ ಬೆಲೆ ಕಡಿಮೆ ಮಾಡಿ ಕೊಡುವಾಗ ಈ ಗೊಬ್ಬರವನ್ನು ಪರೀಕ್ಷೆ ಮಾಡಿ ನಂತರ ಕೊಡಬೇಕು, ಇಲ್ಲದೆ ಇದ್ದರೆ ರೈತರು ಕೊಳೆತ ಗೊಬ್ಬರವನ್ನುಪಯೋಗಿಸಿದರೆ ಅವರಿಗೆ ಬಹಳ ಕಷ್ಟವಾಗುತ್ತದೆ. ಆದುದರಿಂದ ಸರ್ಕಾರ ದಾಸ್ತಾನು ಆಗಿ ಕೊಳೆಯುತ್ತಿರುವ ಗೊಬ್ಬರವನ್ನು ಸರಿಯಾಗಿ ಪರೀಕ್ಷೆ ಮಾಡಿ ರೈತರಿಗೆ ಕೊಡಬೇಕು. ಇನ್ನು ಕೆಲವು ದಿನಗಳು ಗೊಬ್ಬರದ ಸ್ಟಾಕ್ ಹಾಗೇ ಉಳಿದರೆ ಅದು ಯಾರಿಗೂ ಉಪಯೋಗವಾಗುವುದಿಲ್ಲ. ಇದರ ಕಡೆಗೆ ಸರಕಾರ ವಿಚಾರ ಮಾಡಬೇಕು.

ಇನ್ನು ಡಿಮ್ಯಾಂಡು 54ರಲ್ಲಿ ಮೈಸೂರು ಎಲೆಕ್ಟ್ರಿಸಿಟಿ ಬೋರ್ಡಿನಿಂದ ಸರಕಾರಕ್ಕೆ ಬರಬೇಕಾದ ಹಣ ಸುಮಾರು 7,32,26,082 ಎಂದು ಇದೆ. ಇದನ್ನು ಅವರು ಕೊಡುವುದಕ್ಕೆ ಆಗಲಿಲ್ಲ ಎಂದು ಬೋರ್ಡಿನವರಿಗೆ ಇದನ್ನು ಐದು ವಾರ್ಷಿಕ ಕಂತುಗಳಲ್ಲಿ ಕೊಡಬೇಕೆಂದು ಮಾಡಿದ್ದಾರೆ. ಇದೇ ರೀತಿ ರೈತರು ಏನಾದರೂ ಪಂಪು ಸೆಟ್ಟುಗಳನ್ನು ಸಾಲದಮೇಲೆ ತೆಗೆದುಕೊಂಡು ಉಪಯೋಗಿಸುವಾಗ ಅವರಿಗೆ ಪವರು ಕನ್‌ಸಂಪ್ಷನ್ ಚಾರ್ಜು ಕೊಡಲು ಕಷ್ಟವಾಗಿರುವಾಗ ಅವರಿಗೂ ಇಂತಹ ಸೌಕರ್ಯಗಳನ್ನು ಬೋರ್ಡಿನವರು ಏಕೆ ಒದಗಿಸಿಕೊಡಬಾರದು ಎಂದು ನಾನು ಇಲ್ಲಿ ಕೇಳುತ್ತೇನೆ. ಎಲೆಕ್ಟ್ರಿಸಿಟಿ ಬೋರ್ಡಿನವರಿಗೆ ಐದು ವರ್ಷಗಳ ಅವಕಾಶ ಕೊಡಬೇಕು ಎಂದು ಮಾಡಿರುವಂತೆ

(ಶ್ರೀ ಸಿ. ಎಂ. ಎಸ್. ಶಾಸ್ತ್ರಿ)

ರೈತರಿಗೂ ಕೂಡ ಅವರ ಸಾಲಗಳನ್ನು ವಾಪಸ್ಸು ಕೊಡುವಾಗ ಅನುಕೂಲ ಮಾಡಿಕೊಡಬೇಕು. ಅಲ್ಲದೆ ಈಚೆಗೆ ಕನ್‌ಸಂಪ್‌ಷನ್ ಚಾರ್ಜುಗಳನ್ನು ಜಾಸ್ತಿ ಮಾಡಿದ್ದಾರೆ. ಇದರ ಕಡೆಗೆ ಸರಕಾರ ವಿಚಾರ ಮಾಡಬೇಕು.

ಮಾನ್ಯ ಅಧ್ಯಕ್ಷರು ಇಷ್ಟು ಮಾತಾಡಲು ಅವಕಾಶ ಕೊಟ್ಟುದಕ್ಕಾಗಿ ಅವರನ್ನು ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಎನ್. ಹುಚ್ಚಮಾಸ್ತಿಗೌಡ (ಹುಲಿಯೂರುದುರ್ಗ).—ಮಾನ್ಯ ಅಧ್ಯಕ್ಷರೇ, ಸಪ್ಲಿಮೆಂಟರಿ ಡಿಮ್ಯಾಂಡ್ಸ್‌ಗಳ ಬಗ್ಗೆ ವಿರೋಧ ಪಕ್ಷದ ನಾಯಕರಾದ ಶ್ರೀಮಾನ್ ಶಿವಪ್ಪನವರು ಇಲ್ಲಿ ಅನೇಕ ಟೀಕೆಗಳನ್ನು ಮಾಡಿದ್ದಾರೆ. ಮಾರ್ಚಿ ತಿಂಗಳಲ್ಲಿ ಬಡ್ಜೆಟ್ ಮಂಡಿಸಿದಾಗ ಈ ಹೆಚ್ಚುವರಿ ಬೇಡಿಕೆಗೆ ಸಂಬಂಧಪಟ್ಟ ವಿಷಯಗಳನ್ನು ಸೇರಿಸಿಲ್ಲ. ಅಲ್ಲದೆ ಮಾರ್ಚಿ ತಿಂಗಳ ಆಖೈರಿನಲ್ಲಿ ಕೂಡ ಇಂತಹ ಸಪ್ಲಿಮೆಂಟರಿ ಎಸ್ಟಿಮೇಂಟ್ಸ್‌ಗಳು ಬಂದಿದ್ದುವು. ಅದರಲ್ಲಿ ಕೂಡ ಕೆಲ ಕೆಲವು ಐಟಂಗಳಿಗಾಗಿ ಕೆಲವು ಡಿಮ್ಯಾಂಡುಗಳನ್ನು ನಮ್ಮ ಮುಂದೆ ಇಟ್ಟಿದ್ದರು.

ಇದನ್ನು ಪ್ರಜಾಪ್ರತಿನಿಧಿಗಳ ಗಮನಕ್ಕೆ ಸರಿಯಾದ ಕಾಲದಲ್ಲಿ ತರುವುದಕ್ಕೆ ಇಷ್ಟ ಇಲ್ಲದೆ ತಪ್ಪಿಸಿಕೊಳ್ಳುವ ಉದ್ದೇಶದಿಂದ ಈ ಕುಹಕ ನೀತಿಮಾರ್ಗ ಅನುಸರಿಸುವುದು ಸರಿಯಾದುದಲ್ಲ ಎಂದು ನಾನು ಕಟುವಾಗಿ ಹೇಳುತ್ತೇನೆ. ಅನೇಕ ನ್ಯೂನತೆಗಳನ್ನು ಈ ಸಭೆಯ ಮುಂದೆ ತರದೆ ಯಾವು ಯಾವುದೋ ಬಾಬುಗಳಿಗೆ ಈ ಹೆಚ್ಚುವರಿ ಬೇಡಿಕೆ ತರುವುದು ಸರಿಯಾದುದಲ್ಲ. ಅನಿರೀಕ್ಷಿತವಾಗಿ ಬರತಕ್ಕಂಥ ಬಾಬುಗಳಿಗೆ ಮಾತ್ರ ಈ ಹೆಚ್ಚುವರಿ ಬೇಡಿಕೆ ತರಬೇಕು. ಮೊದಲೇ ಸಭೆಯ ಗಮನಕ್ಕೆ ತರದೆ ಈ ರೀತಿ ಖರ್ಚು ಮಾಡಿದರೆ ಅದನ್ನು ತಡೆಗಟ್ಟಬೇಕು. ಯಾವುದಕ್ಕೆ ಪ್ರಾಮುಖ್ಯತೆ ಕೊಡಬೇಕು ಎನ್ನುವ ವಿವೇಚನೆ ಸರ್ಕಾರಕ್ಕೆ ಇಲ್ಲ ಎಂದು ನಾನು ಭಾವಿಸುತ್ತೇನೆ. ನಮಗೆ ನ್ಯಾಯವಾಗಿ ಸಲ್ಲಬೇಕಾದಂಥ ನೀರಾವರಿ ಸೌಲಭ್ಯಗಳನ್ನು ಒದಗಿಸಿಕೊಡುವುದಕ್ಕೆ ಹಣ ಇಲ್ಲ ಎಂದು ಒಂದು ಕಡೆ ಹೇಳುವುದು, ಮತ್ತೊಂದು ಕಡೆ ಆತುರಾತುರವಾಗಿ ಕೆಲಸಗಳನ್ನು ತೆಗೆದುಕೊಂಡು ಸಪ್ಲಿಮೆಂಟರಿ ಗ್ರ್ಯಾಂಟ್ ರೂಪದಲ್ಲಿ ತಂದು ಮಂಜೂರು ಮಾಡಿಸಿಕೊಳ್ಳುವುದು, ಈ ರೀತಿ ಒಂದಕ್ಕೊಂದಕ್ಕೆ ಅರ್ಥಾರ್ಥ್ ಸಂಬಂಧವಿಲ್ಲ ಎಂದು ಹೇಳುತ್ತೇನೆ. ಕಿತ್ತೂರು ರಾಣಿ ಚೆನ್ನಮ್ಮ ಮೆಮೋರಿಯಲ್ ಹೆಸರಿನಲ್ಲಿ 5 ಲಕ್ಷ ರೂಪಾಯಿ ಕೊಟ್ಟಿದ್ದೀರಿ. ನಿಮಗೆ ಪ್ರಾಮುಖ್ಯವಾದಂಥ ಬಾಬುಗಳಿಗೆ ಅಂದರೆ ನೀರಾವರಿ ಬಾಬಿಗೆ ಹಣ ಒದಗಿಸುವುದಿಲ್ಲ. ಸಣ್ಣ ನೀರಾವರಿ ಕೆಲಸಕ್ಕೆ 30 ಲಕ್ಷ ರೂಪಾಯಿ ಒದಗಿಸಿದ್ದೀರಿ. ಇದಕ್ಕೆ ಇನ್ನೂ 10 ಲಕ್ಷವಲ್ಲ, 20 ಲಕ್ಷವಲ್ಲ, ಒಂದು ಕೋಟಿ ರೂಪಾಯಿ ಹೆಚ್ಚಾಗಿ ಒದಗಿಸಿದ್ದರೂ ಕೂಡ ಪ್ರಯೋಜನ ವಾಗುತ್ತಿತ್ತು. ಹೆಚ್ಚಿನ ಆಹಾರೋತ್ಪತ್ತಿಗೆ ಅನುಕೂಲವಾಗುತ್ತಿತ್ತು. ಇದಕ್ಕೆ ಹಣ ಒದಗಿಸುವುವುಕ್ಕೆ ತಮ್ಮ ಹತ್ತಿರ ಹಣ ಇಲ್ಲ, ಈ ದೃಷ್ಟಿಯಿಂದ ಕಿತ್ತೂರು ರಾಣಿ ಚೆನ್ನಮ್ಮ ಮೆಮೋರಿಯಲ್‌ಗೆ 5 ಲಕ್ಷ ರೂಪಾಯಿ ತಾವು ಕೊಟ್ಟಿರುವುದು ಒಂದು ದೋಷ.

ಇನ್ನೊಂದು ವಿಷಯ ಹೇಳಬೇಕಾದರೆ ಒಂದು ರಿಜಿಸ್ಟರ್ಡ್ ಇನ್‌ಸ್ಟಿಟ್ಯೂಷನ್‌ಗೆ ಮೊದಲು ಹಣ ಕೊಟ್ಟುಬಿಡುವುದು ಅನಂತರ ಅದನ್ನು ಕೈಬಿಟ್ಟುಬಿಡುವುದು, ಈ ರೀತಿ ಮಾಡುವುದು ಸರಿಯಾದುದಲ್ಲ. ಇದರಲ್ಲಿ ಏನು ಉದ್ದೇಶ ಇದೆಯೋ ಏನೋ ಗೊತ್ತಾಗುವುದಿಲ್ಲ.

ಈ ಸಂದರ್ಭದಲ್ಲಿ ನಾನು ಒಂದು ವಿಚಾರ ಒತ್ತಾಯಪೂರ್ವಕವಾಗಿ ಮಾನ್ಯ ಹಣಕಾಸಿನ ಸಚಿವರಿಗೆ ಹೇಳುವುದಕ್ಕೆ ಇಷ್ಟಪಡುತ್ತೇನೆ. ಒಂದು ಪಕ್ಷ ಅದರಮೇಲೆ ಹಣ ಕೊಡುವುದು ತುಂಬ ಅವಶ್ಯಕತೆ ಎಂದು ಕಂಡುಬಂದಿದ್ದರೆ ಹಣ ಕೊಟ್ಟಮೇಲೆ ಅದರ ಮೇಲೆ ಸರ್ಕಾರದ ಪೂರ್ಣ ಹತೋಟಿ ಇರಬೇಕು. ಅದು ಬಿಟ್ಟು ಹಣ ಪಡೆದಮೇಲೆ ಬೇರೆಯವರಿಗೆ ಒಪ್ಪಿಸತಕ್ಕಂಥ ನೀತಿ ಸರಿಯಲ್ಲ ಎಂದು ಹೇಳುತ್ತೇನೆ.

ಇನ್ನು ಕ್ಷಾಮಪರಿಹಾರ ಕಾರ್ಯಕ್ರಮ ಕೈಗೊಳ್ಳುವುದರಲ್ಲಿ 5 ವರ್ಷದಿಂದಲೂ ಒಂದೇ ಸಮನೆ ಲಕ್ಷಾಂತರ ರೂಪಾಯಿ ಹಣ ಖರ್ಚು ಮಾಡುತ್ತಿದ್ದಾರೆ. ಎಷ್ಟು ಹಣ ಖರ್ಚು ಮಾಡಿದ್ದಾರೋ ಅಷ್ಟೇ ಹಣ ದುರುಪಯೋಗವಾಗಿದೆ. ಎಷ್ಟು ಹಣ ಶಾಶ್ವತ ಪರಿಹಾರಕ್ಕೆ ಸಿಕ್ಕಲಿಲ್ಲ ಎನ್ನುವುದು ನಾವು ಕಣ್ಣಾರೆ ನೋಡುತ್ತಿದ್ದೇವೆ. ಒಂದು ಉದಾಹರಣೆ ಹೇಳುವುದಾದರೆ ನನ್ನ ಭಾಗದಲ್ಲಿ ನಾಗಮಂಗಲ ತಾಲ್ಲೂಕಿಗೆ 18—20 ಲಕ್ಷ ರೂಪಾಯಿ ಖರ್ಚು ಮಾಡಿದ್ದಾರೆ. ಅಲ್ಲಿ ಹೋಗಿ ನೋಡಿದರೆ ನೂರಾರು ಗೋಕಟ್ಟೆಗಳಿಗೆ ಹಣ ಖರ್ಚು ಮಾಡಿದ್ದಾರೆ. ಅದರಲ್ಲಿ ಶೇಕಡ 10 ರಷ್ಟೂ ಕೂಡ ಮಳೆಗಾಲದಲ್ಲಿ ನಿಲ್ಲುವುದಿಲ್ಲ. ಎಲ್ಲಿ ಗೋಕಟ್ಟೆ ಕಟ್ಟಿದರೆ ನಿಲ್ಲುತ್ತದೋ ಅಲ್ಲಿ ಕೆಲಸ ಮಾಡುವು

ದಿಲ್ಲ, ಇದನ್ನು ನಿರ್ಧರಿಸಿ ಹೇಳುವವರು ಯಾರೂ ಇಲ್ಲ. ಏತಕ್ಕೆಂದರೆ ಅಲ್ಲಿ ಒಬ್ಬ ಬಿ.ಡಿ.ಓ. ಹತ್ತಿರ ಒಬ್ಬ ಸೂಪರ್‌ವೈಸರ್ ಇದ್ದಾರೆ ಅವರಿಗೆ ಅವನೇ ಚೀಫ್ ಇಂಜಿನೀಯರ್, ಅವನೇ ಸೂಪರಿಂಟೆಂಡಿಂಗ್ ಇಂಜಿನಿಯರಿಂಗ್. ಅವನು ಏನು ತೀರ್ಮಾನ ಮಾಡುತ್ತಾನೋ ಆ ರೀತಿ ಕೆಲಸ ಮಾಡುತ್ತಾರೆ. ಯಾವ ಕಡೆ ಗೋಕಟ್ಟೆ ಕಟ್ಟಬೇಕು ಎಂದು ಹೇಳುತ್ತಾನೋ ಆಕಡೆ ಕಟ್ಟುತ್ತಾರೆ. ಯಾವ ಕಡೆ ಗೋಕಟ್ಟೆ ಒಡೆಯಬೇಕು ಎಂದು ಹೇಳುತ್ತಾನೋ ಆಕಡೆ ಒಡೆಯುತ್ತಾರೆ. ಒಂದು ರಸ್ತೆ ಮಾಡಬೇಕಾದರೂ ಎಲ್ಲಿ ರಸ್ತೆ ಮಾಡಿದರೆ ಜನಗಳಿಗೆ ಉಪಯೋಗವಾಗುತ್ತದೆ, ಅಲ್ಲಿ ರಸ್ತೆ ಕೆಲಸಗಳನ್ನು ಕೈಗೊಳ್ಳುವುದಿಲ್ಲ. ಅವನು ಯಾವ ರಸ್ತೆಯನ್ನು ಮಾಡಿಸಬೇಕು ಎಂದು ಹೇಳುತ್ತಾನೋ ಅದನ್ನು ಮಾಡಿಸುತ್ತಾರೆ. ಇದರಿಂದ ಆ ರಸ್ತೆಗಳು ಒಂದುಸಾರಿ ಮಳೆಗಾಲ ಬಂದರೆ ಸಾಕು ಎಲ್ಲಾ ಕೊಚ್ಚಿಕೊಂಡು ಹೊರಟು ಹೋಗುತ್ತದೆ. ಪುನಃ ರಸ್ತೆಯ ಗುರುತೇ ಸಿಕ್ಕುವುದಿಲ್ಲ. ಇಂಥಾದಕ್ಕೆಲ್ಲಾ ಈ ರೀತಿಯಾಗಿ ಹಣ ಖರ್ಚು ಮಾಡಿದರೆ ಈ ಕಡೆ ರೈತರಿಗೂ ಪ್ರಯೋಜನವಾಗುವುದಿಲ್ಲ, ಆ ಕಡೆ ಸರ್ಕಾರದ ಬೊಕ್ಕಸದಲ್ಲಿ ಹಣವೂ ಕೂಡ ಉಳಿಯುವುದಿಲ್ಲ. ಇಂಥ ಹಣವನ್ನು ನೇರವಾಗಿ ರೈತರಿಗೆ ಕೊಟ್ಟರೆ ಶಾಶ್ವತ ಪರಿಹಾರವಾಗುವುದಿಲ್ಲವೇ ಎಂದು ನಾನು ಕೇಳುತ್ತೇನೆ. ಈ ರೀತಿ ಪ್ರಯೋಜನವಿಲ್ಲದ ಕೆಲಸ ಮಾಡುವ ಬದಲಾಗಿ ಅದನ್ನು ನಿಲ್ಲಿಸುವುದು ಒಳ್ಳೆಯದು ಎಂದು ನನ್ನ ಅಪೇಕ್ಷೆ. ನನ್ನ ಭಾಗದ ನಾಗಮಂಗಲ ತಾಲ್ಲೂಕಿಗೆ ಕೊಟ್ಟಿರುವ 18-20 ಲಕ್ಷ ರೂಪಾಯಿನಲ್ಲಿ 5 ಲಕ್ಷ ರೂಪಾಯಿನ ಕೆಲಸವೂ ಕೂಡ ಆಗಿಲ್ಲ. ಅಲ್ಲ ಒಬ್ಬ ಬಿ.ಡಿ.ಓ. ಅವರ ಅಧಿಕಾರ ವ್ಯಾಪ್ತಿಯಲ್ಲಿ ಈ ಕೆಲಸಗಳಿಗೋಸ್ಕರ ಒದಗಿಸಿದ್ದಂಥ ಹಣದಲ್ಲಿ ಅವನು ಒಂದು ಲಕ್ಷ ರೂಪಾಯಿಯನ್ನು ಬಚ್ಚಿಟ್ಟಿದ್ದ ಎಂದು ನನಗೆ ವರ್ತಮಾನ ಬಂದಿದೆ. ಅಷ್ಟೇ ಏಕೆ ? ಲೆಕ್ಕ ಕೂಡ ಇದೆ. ಅವನು ನ್ಯಾಯವಾಗಿ ಕೆಲಸ ಮಾಡುತ್ತಿದ್ದಾನೆಯೇ ಎಂದು ನೋಡುತ್ತಿದ್ದೀರಾ ? ಇಲ್ಲ. ಯಾರು ಯಾರು ಎಷ್ಟೆಷ್ಟು ಹಣವನ್ನು ಹೊಡೆಯಬೇಕೋ ಅವರಿಗೆಲ್ಲರಿಗೂ ಈ ಸರ್ಕಾರದಲ್ಲಿ ಸಾಕಾದಷ್ಟು ಅವಕಾಶ ಇದೆ ಎಂದು ಹೇಳುತ್ತೇನೆ.

ನಮ್ಮ ತಾಲ್ಲೂಕಿನಲ್ಲಿ ಕೂಡ ಇಂಥವು ನಡೆದಿವೆ. ಪ್ರತಿ ಸಲ ಕ್ಷಾಮ ನಿವಾರಣಾ ಕಾರ್ಯಗಳು ಪ್ರಾರಂಭವಾಗಿ ನಡೆಯುತ್ತಿವೆ. ಇದಕ್ಕೆ ಅವಕಾಶ ನಾವು ಕೊಡುತ್ತೇವೆ. ತೊಂದರೆಯಲ್ಲಿರುವ ಸಹಸ್ರಾರು ಜನರಿಗೆ ಪರಿಹಾರ ಕೊಡುವುದಕ್ಕೆ ನಾವು ಕೊಡುವಂಥ ಹಣ ಯಾರಿಗೋ ಕೆಲವರಿಗೆ ಫಲಹಾರಕ್ಕಾಗಿ ಕೊಟ್ಟಂತಾಗಿದೆ. ಸರ್ಕಾರ ಇದನ್ನು ತೀವ್ರ ರೀತಿಯಲ್ಲಿ ಗಮನಕ್ಕೆ ತೆಗೆದುಕೊಳ್ಳಬೇಕು. ಪರಿಹಾರ ಕಾರ್ಯಗಳನ್ನು ಬಿ.ಡಿ.ಓ. ಮುಖಾಂತರ ನಡೆಸುವುದಕ್ಕೆ ಬದಲಾಗಿ ಲೋಕೋಪಯೋಗಿ ಇಲಾಖೆಯವರಿಗೆ ವಹಿಸುವುದು ಒಳ್ಳೆಯದು. ಆ ಇಲಾಖೆಯಲ್ಲಿ ಲಂಚಕೋರತನವಿದೆ, ಅಕ್ರಮಗಳು ನಡೆಯುತ್ತವೆ ಎನ್ನುವ ಸಾಮಾನ್ಯ ಅಪಾದದೆ ಇದ್ದರೂ ಕೂಡ ಅವರು ಒಂದು ಲೆಕ್ಕವನ್ನಾದರೂ ಇಟ್ಟು, ಅಳತೆ ಮಾಡಿ, ಅಂದಾಜುಗಳನ್ನು ತಯಾರು ಮಾಡಿ ಕೆಲಸ ಮಾಡುವುದಾದರೂ ಅಲ್ಲಿದೆ. ಈಗ ನಡೆಯುತ್ತಿರುವುದರಲ್ಲಿ ಅಂದಾಜಿಲ್ಲ, ಲೆಕ್ಕವಿಲ್ಲ, ಯಾರು ಹೇಳುವವರು ಕೇಳುವವರು ಇಲ್ಲ. ಒಬ್ಬ ಸೂಪರ್‌ವೈಸರ್ ಆಗಿ ಕೆಲಸ ಮಾಡುತ್ತಿರುವವನೇ ಅಲ್ಲಿ ಚೀಫ್ ಇಂಜಿನಿಯರಾಗುತ್ತಾನೆ. ಅವನ ಕೈಕೆಳಗೆ ಈ ಕೆಲಸವೆಲ್ಲ ನಡೆಯುತ್ತದೆ. ಇಂಥದ್ದನ್ನು ಕಂಡೂ ಕಂಡೂ ಈ ಕ್ಷಾಮ ನಿವಾರಣಾ ಕಾರ್ಯಗಳನ್ನು ನಡೆಸತಕ್ಕ ರೆವೆನ್ಯೂ ಮಂತ್ರಿಗಳು ಯಾವುದಾದರೂ ಸರಿಯಾಗಿದೆಯೋ ಇಲ್ಲವೊ ಎಂದು ನೋಡಬೇಕು. ಅದಿಲ್ಲ. ಈ ರೀತಿ ದಿಕ್ಕೆಟ್ಟು ಹೋಗಿದೆ, ಮೂಗುದಾರ ಹಾಕುವವರು ಯಾರೂ ಇಲ್ಲ. 90 ಲಕ್ಷ ರೂಪಾಯಿಗಳನ್ನು ಖರ್ಚು ಮಾಡುವಾಗ ಸರಿಯಾದ ಕಾರ್ಯಕ್ರಮ ತೆಗೆದುಕೊಂಡು ಇಂಜಿನಿಯರಿಂಗ್ ಇಲಾಖೆಯ ಮುಖಾಂತರ ಕೆಲಸ ನಡೆಸುವಂತೆ ಮಾಡಬೇಕು. ಅಂದಾಜು ತಯಾರು ಮಾಡದೆ ಏನೂ ಇಲ್ಲದೆ ಕೆಲಸ ಮಾಡಿ ದುಡ್ಡನ್ನು ವ್ಯಥಾ ವ್ಯಯ ಮಾಡುವುದು ಸರ್ಕಾರದ ಬೊಕ್ಕಸಕ್ಕೆ ಹಾನಿಯನ್ನುಂಟು ಮಾಡಿದಂತಾಗುತ್ತದೆ. ಇದನ್ನು ತಪ್ಪಿಸಬೇಕು ಎಂದು ಸಲಹೆ ಮಾಡುವುದಕ್ಕೆ ಇಷ್ಟಪಡುತ್ತೇನೆ.

ಈಗ ನಮ್ಮ ಅರ್ಥ ಮಂತ್ರಿಗಳು ಅನುಸರಿಸುವ ನೀತಿ ಸರಿಯಾದುದಲ್ಲ. ಯಾವುದೇ ಹಣವನ್ನು ಖರ್ಚು ಮಾಡಬೇಕಾದರೂ ತೀರ ಅನಿವಾರ್ಯವಾದ ಪ್ರಸಂಗಗಳನ್ನು ಬಿಟ್ಟು, ಉಳಿದ ಪ್ರಸಂಗಗಳಲ್ಲಿ ಸಭೆಯ ಗಮನಕ್ಕೆ ತಂದು ಪಡೆದು ಹಣವನ್ನು ಖರ್ಚು ಮಾಡತಕ್ಕ ನೀತಿಯನ್ನು ಅನುಸರಿಸದೆ ಅಂಗಿದಾಗ್ಗೆ ಕಾನೂನು ಪ್ರಕಾರವಾಗಿ ಅಧಿಕಾರವಿದೆ ಎಂದು ಸಪ್ಲಿಮೆಂಟರಿ ಗ್ರಾಂಟ್ ರೂಪದಲ್ಲಿ ಹಣವನ್ನು ಪಡೆಯತಕ್ಕ ನೀತಿಯನ್ನು ನಿಲ್ಲಿಸಬೇಕೆಂದು ಸಲಹೆ ಮಾಡಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಎಸ್. ಬಂಗಾರಪ್ಪ (ಸೊರಬ).—ಮಾನ್ಯ ಉಪಾಧ್ಯಕ್ಷರೇ, ಮಾನ್ಯ ಹಣಕಾಸಿನ ಸಚಿವರು ಈ ಸದನದಲ್ಲಿ ಮಂಡಿಸಿರತಕ್ಕ ಹೆಚ್ಚುವರಿ ಬೇಡಿಕೆಗಳ ಬಗ್ಗೆ ನಾನು ಎರಡು ಮಾತುಗಳನ್ನು ಹೇಳುವುದಕ್ಕೆ ಆಸೆ ಪಡುತ್ತೇನೆ. ಪ್ರಜಾಪ್ರಭುತ್ವದಲ್ಲಿ ಕೆಲವು ನಿಯಮಗಳನ್ನು

(ಶ್ರೀ ಎಸ್. ಬಂಗಾರಪ್ಪ)

ಅನುಸರಿಸಬೇಕಾಗುತ್ತದೆ. ಅದು ಸಪ್ಲಿಮೆಂಟರಿ ಡಿಮಾಂಡನ್ನು ಯಾವಾಗ ಇಡಬೇಕು ಎನ್ನುವ ವಿಷಯಕ್ಕೆ ಯಾವಾಗ ಕೇಳಬೇಕು ಎನ್ನುವ ವಿಷಯಕ್ಕೆ ಸಂಬಂಧಪಟ್ಟದ್ದು. ಈಗಾಗಲೇ ಈ ಸದನದ ಮಾನ್ಯ ಸದಸ್ಯರಾದ ಶ್ರೀಮಾನ್ ಹುಚ್ಚಮಾಸ್ತಿ ಗೌಡರು ಅದರ ಬಗ್ಗೆ ಸಾಕಷ್ಟು ವಿವರಗಳನ್ನು ಕೊಟ್ಟಿದ್ದಾರೆ. ಇನ್ನು ಹೆಚ್ಚು ಅದರ ಬಗ್ಗೆ ಹೇಳುವುದಕ್ಕೆ ನಾನು ಆಸೆ ಪಡುವುದಿಲ್ಲ. ಆದರೆ ಮೂಲತಃ ಪ್ರಜಾಪ್ರಭುತ್ವಕ್ಕೆ ಬದ್ಧರಾಗಿರತಕ್ಕ ಜನ ನಾವು ಕೆಲವೊಂದು ತಪ್ಪನ್ನು ಮಾಡಿದ್ದೇವೆ, ಮಾಡುತ್ತಿದ್ದೇವೆ. ಅದೇನೆಂದರೆ ಇನ್ನೂ ಕೂಡ ಸ್ವಾತಂತ್ರ್ಯ ಬರುವುದಕ್ಕೆ ಮೊದಲು ಹೀಗೆ ಬೇಡಿಕೆಗಳನ್ನು ಯಾವುದೇ ನಮೂನೆಯಲ್ಲಿ ಇಟ್ಟಿದ್ದರೂ ಕೂಡ, ಅದನ್ನು ಪಾಸ್ ಮಾಡಿಕೊಂಡು ಖರ್ಚು ಮಾಡುವುದಕ್ಕೆ ಹಣವನ್ನು ತೆಗೆದಿಟ್ಟಿದ್ದರೂ ಕೂಡ, ಅದರ ಬಗ್ಗೆ ಪ್ರಶ್ನೆ ಮಾಡತಕ್ಕ ಅಧಿಕಾರ ಜನತೆಗೆ ಆಗ ಇರಲಿಲ್ಲ. ಆದರೆ ಸ್ವಾತಂತ್ರ್ಯಾನಂತರ ಕೆಲವೊಂದು ಮೂಲ ವಿಷಯಗಳ ಬಗ್ಗೆ ಹೆಚ್ಚಿನ ಗಮನವನ್ನು ಕೊಡತಕ್ಕ ಪರಿಸ್ಥಿತಿಯಲ್ಲಿ ನಾವು ಇದ್ದೇವೆ. ನಾವು ಇನ್ನೂ ಕೂಡ ಪ್ರಜಾರಾಜ್ಯ ಪದ್ಧತಿ ಸರಿ ಎಂದು ಹೇಳತಕ್ಕ ವಿಚಾರವನ್ನು ತೀರ್ಮಾನ ಮಾಡಬೇಕಾಗಿದೆ.

3-30 P.M.

ಕಷ್ಟದಲ್ಲಿರುವ ದೇಶ ಇದು, ಹಣಕಾಸಿನ ತೊಂದರೆ ವಿಪರೀತವಾಗಿರುವ ದೇಶ ಇದು, ಭಾರತದ ಸಾಲದ ಹೊರೆ 15 ಸಾವಿರ ಕೋಟಿಗಿಂತ ಹೆಚ್ಚಾಗಿದೆ, ಬಡತನ ಮೂರ್ತಿವೆತ್ತಿದೆ, ಹಲವಾರು ಸಮಸ್ಯೆಗಳಿವೆ, ದಿವಸಕ್ಕೆ 24 ಗಂಟೆಗಳಕಾಲ ಗಮನಕೊಟ್ಟರೂ ಅವು ಬಗೆ ಹರಿಯುವುದಿಲ್ಲ. ಇಂಥ ಪ್ರಶ್ನೆಯಿದೆ, ಎಲ್ಲರಿಗೂ ಇದು ಗೊತ್ತಿದೆ. ಹೀಗಿರುವಾಗ ಮೂಲತಃ ಯೋಚನೆಮಾಡಿ ಆರ್ಥಿಕವಾಗಿ ಕಷ್ಟದಲ್ಲಿರುವಾಗ ಯಾವ ರೀತಿ ಹಣ ಖರ್ಚುಮಾಡಬೇಕು ಎಂಬುದನ್ನು ಮನಗಂಡು ಒಂದು ಸರಿಯಾದ ವ್ಯವಸ್ಥೆಯನ್ನು ರೂಢಿಸಬೇಕು. ಈಗ ಹಲವಾರು ಬೇಡಿಕೆಗಳಿವೆ, ಮಾನ್ಯ ಸದಸ್ಯರು ತಮ್ಮ ಅಭಿಪ್ರಾಯಗಳನ್ನು ತಿಳಿಸಿದ್ದಾರೆ, ರಾಜಭವನಕ್ಕೆ ಲಕ್ಷಾಂತರ ರೂಪಾಯಿ ಖರ್ಚಾಗಿದೆ. ಕಿತ್ತೂರು ರಾಣಿ ಚನ್ನಮ್ಮ ಸ್ಮಾರಕಕ್ಕೆ ಹಲವಾರು ಲಕ್ಷ ಕೊಟ್ಟಿದ್ದಾರೆ, ಆಯವ್ಯಯ ಪಟ್ಟಿ ಚರ್ಚೆ ಯಾದಾಗ ಮತ್ತು ಇತರ ಸಂದರ್ಭಗಳಲ್ಲಿ ಹಲವಾರು ಸಲಹೆಗಳನ್ನು ಕೊಟ್ಟಿದ್ದಾರೆ, ಈಗಲೂ ಅದನ್ನೇ ಹೇಳುತ್ತಿದ್ದಾರೆ. ಈ ಕಷ್ಟ ಪರಿಸ್ಥಿತಿಯಲ್ಲಿ ಹಣ ಯಾವುದಕ್ಕೆ ಖರ್ಚುಮಾಡಬೇಕು, ಯಾವುದಕ್ಕೆ ಮಾಡಬಾರದು ಎಂಬ ವಿಚಾರದಲ್ಲಿ ವಿವೇಚನೆ ಇರಬೇಕು. ನನ್ನ ಪ್ರಕಾರ ಮೂಲತಃ ತಪ್ಪಿದೆ. ಕಿತ್ತೂರು ರಾಣಿಯವರ ಸಾಹಸವನ್ನು ತೋರಿಸಿರಬಹುದು, ರಾಜಭವನಕ್ಕೆ ಖರ್ಚು ಮಾಡಿದ್ದಾರೆ, ಆ ವಿಚಾರ ಇಲ್ಲಿ ಬರುವುದಕ್ಕೆ ಮುಂಚೆ ಭವನ ನಿರ್ಮಾಣವಾಗಿದೆ. ಚನ್ನಮ್ಮನವರ ವಿಚಾರ ಸ್ವಾತಂತ್ರ್ಯಪೂರ್ವಕ್ಕೆ ಸಂಬಂಧಪಟ್ಟಿದ್ದು, ಹಣಕಾಸಿನ ಕೊರತೆಯಿಲ್ಲದಿದ್ದಾಗ, ಕ್ಷಾಮ ಡಾಮರ ಮುಂತಾದುವುಗಳಿಲ್ಲದಿರುವಾಗ ಚನ್ನಮ್ಮ ಸ್ಮಾರಕಕ್ಕೆ, ರಾಜಭವನ ಮುಂತಾದುವುಗಳಿಗೆ ಖರ್ಚುಮಾಡಬಹುದು, ಅಡ್ಡಿಯಿಲ್ಲ. ಆಗ ದುಂದುವೆಚ್ಚ ಸಹ ಮಾಡಬಹುದು. ಆದರೆ ಮುಂದೆ ಏನಾಗಬಹುದೆಂಬುದನ್ನು ಯೋಚನೆ ಮಾಡಬೇಕು. ಜನರು ಮಂತ್ರಿಗಳನ್ನು ಸುತ್ತುಗಟ್ಟಿ ವಿಚಾರ ಮಾಡುವ ಕಾಲ ಬರಬಹುದು. 22 ವರ್ಷಗಳಿಂದ ದುರಾಡಳಿತ ನಡೆದಿದೆ, ಇಲ್ಲಿಯವರೆಗೂ ಯಾವುದಕ್ಕೆ ಅವಶ್ಯಕವಾಗಿ ಖರ್ಚುಮಾಡಬೇಕೆಂಬುದನ್ನು ಇನ್ನೂ ಮನಗಂಡಿಲ್ಲ. ಹಲವಾರು ಉದಾಹರಣೆಗಳಿವೆ. ನಮ್ಮ ಮುಂದಿರುವ ಬೇಡಿಕೆಗಳನ್ನು ನಾವು ಒಪ್ಪಿದರೆ ದುಂದುಗಾರಿಕೆಗೆ, ದುರಾಡಳಿತಕ್ಕೆ ಒಪ್ಪಿಗೆ ನೀಡಿದಂತಾಗುವುದು. ಇವನ್ನು ಒಪ್ಪುವುದಕ್ಕಾಗುವುದಿಲ್ಲ. ಸ್ವಾತಂತ್ರ್ಯ ಬಂದಮೇಲೆ 22 ವರ್ಷಗಳಿಂದ ದುರಾಡಳಿತದ ಬಗ್ಗೆ ಉದಾಹರಣೆಗಳನ್ನು ಬೇಕಾದಷ್ಟು ಸದಸ್ಯರು ಸಾವಿರಾರುಸಲ ಹೇಳಿದ್ದಾರೆ. ಈಗ ಮೊನ್ನೆ ನಡೆದಿರುವ ಒಂದು ಉದಾಹರಣೆ ಕೊಡುತ್ತೇನೆ. ಶಿವ ಮೊಗ್ಗ ಜಿಲ್ಲೆಯ ಷಿಕಾರಿಪುರ ತಾಲ್ಲೂಕು ಬೋರ್ಡ್ ಬಿ.ಡಿ.ಓ.ಗೆ ಉಪಸಚಿವರಾದ ಶ್ರೀ ಬಸವಣ್ಣಪ್ಪ ನವರು ಬೇಕಾದಷ್ಟು ಕುಮ್ಮಕ್ಕು ಮಾಡಿದ್ದಾರೆಂದು ಗೊತ್ತಾಗಿದೆ. ಅಲ್ಲಿ ಕಾಂಗ್ರೆಸ್ ಆಡಳಿತ ಯಾವ ರೀತಿ ಇದೆ ಎಂಬುದನ್ನು ಹೇಳುತ್ತೇನೆ. ಆ ತಾಲ್ಲೂಕು ಬೋರ್ಡಿನಲ್ಲಿ 48 ಸಾವಿರ ರೂಪಾಯಿಗಳ ಮೋಸ ನಡೆದಿದೆ. ಹೇಗಾಯಿತೆಂದರೆ ತಾಲ್ಲೂಕು ಬೋರ್ಡಿಗೆ ಸುಮಾರು 20–22 ಕೆರೆಗಳು ಸೇರಿವೆ. ಈ ಕೆರೆಗಳಿಗೆ ಹಣ ಮಂಜೂರುಮಾಡಿ ಕೊಟ್ಟಿದ್ದಾರೆ, ಆದರೆ ಅಲ್ಲಿ ಒಂದು ತಟ್ಟೆ ಮಣ್ಣು ಕೂಡ ಎತ್ತಿ ಆಚೆಗೆ ಹಾಕಿಲ್ಲ, ನಾನು ಸ್ವತಃ 4-5 ಕೆರೆ ನೋಡಿದ್ದೇನೆ. ಆಮೇಲೆ ಸಾಲ ವಿತರಣೆ ಮಾಡಿರುವುದನ್ನು ನೋಡಿದರೆ ಸುಮಾರು 4-5 ವರ್ಷಹಿಂದೆ ಸತ್ತವರು ಯಾರೋ ಸಾಲದ ಅರ್ಜಿ ಕೊಟ್ಟಿರುವಂತೆ ರಿಕಾರ್ಡು ಬಲ್ಲಪ್ ಮಾಡಿ ಹಣ ತಿಂದುಹಾಕಿದ್ದಾರೆ, ಯಾರಿಗೂ ಕೊಟ್ಟಿಲ್ಲ. ವಿಷಯ ಗೊತ್ತಾದ ಕೂಡಲೆ ಯಾರ ಹೆಸರಿನಲ್ಲಿ ಮಂಜೂರು ಮಾಡಿದ್ದರೋ ಅವರ ಮನೆಯವರು ನಮ್ಮ ಹತ್ತಿರ ಬಂದರು,

ಜಿಲ್ಲಾಧಿಕಾರಿಗಳಿಗೆ ತಿಳಿಸಿದ್ದಾರೆ, ಇನ್ನೂ ಅನೇಕ ಅಧಿಕಾರಿಗಳಿಗೆ ತಿಳಿಸಿದ್ದಾರೆ, ಆದರೂ ಕೂಡ ಇಂದಿನವರೆಗೆ ವಿಚಾರಣೆಮಾಡಿಲ್ಲ. ಇನ್ನೊಬ್ಬ ವ್ಯಕ್ತಿ ಹೆಸರು ಹೇಳುವುದಿಲ್ಲ ತನ್ನ ಜಮೀನನ್ನು 3 ವರ್ಷಗಳ ಹಿಂದೆ ಮಾರಿದ್ದಾನೆ, ನಂತರ ಅವನ್ನೇ ಸೊಸೈಟಿಗೆ ದೀಡು ಮಾಡಿದ್ದಾನೆ. ಸಬ್ ರಿಜಿಸ್ಟ್ರಾರ್ ಆಫೀಸಿನಲ್ಲಿ, ತಾಲ್ಲೂಕು ಆಫೀಸಿನಲ್ಲಿ ಟ್ರಾನ್ಸ್‌ಫರ್ ಆಫ್ ಪ್ರಾಪರ್ಟಿ ಆಕ್ಟಿನ ಪ್ರಕಾರ ಸರ್ಟಿಫಿಕೇಟ್ ಕೊಡುವುದರಲ್ಲಿ ನಮೂದು ಮಾಡಿಲ್ಲ. ಜಮೀನು ಮಾರಿ ಒಂದೂವರೆ ವರ್ಷವಾದ ಮೇಲೆ ಸೊಸೈಟಿಗೆ ದೀಡು ಮಾಡಿ ಸಾಲ ತೆಗೆದುಕೊಂಡಿದ್ದಾರೆ. ಪುನಃ ಅದೇ ಸರ್ವೆ ನಂಬರು ಮೂವತ್ತನಾಲ್ಕನೆಯ ಒಂದನ್ನು ಶಿಕಾರಿಪುರ ತಾಲ್ಲೂಕು ಬೋರ್ಡಿಗೆ ಆಧಾರಮಾಡಿ ಸಾಲ ತೆಗೆದು ಕೊಂಡಿದ್ದಾರೆ. ಇನ್ನೂ ಬೇರೆ ಬೇರೆ ಜನರ ಹೆಸರಿಗೆ ಸಾಲದ ಅರ್ಜಿಗಳನ್ನು ಕೊಟ್ಟು, ಸುಳ್ಳು ಜನರನ್ನು ಸೃಷ್ಟಿಮಾಡಿ ಅವರ ಹೆಸರಿನಲ್ಲಿ ಬೇಕಾದಷ್ಟು ಸಾಲ ತೆಗೆದುಕೊಂಡಿದ್ದಾರೆ. ಕೆರೆಯಲ್ಲಿ ಮಣ್ಣು ಸಹ ತೆಗೆಯದೆ ರಿಪೇರಿಗೆಂದು 48 ಸಾವಿರ ರೂಪಾಯಿ ತಾಲ್ಲೂಕು ಬೋರ್ಡಿನಲ್ಲಿ ಖರ್ಚು ಹಾಕಿದ್ದಾರೆ, ಈ ಸಂಬಂಧದಲ್ಲಿ ವಿಜಿಲೆನ್ಸ್ ಕಮಿಷನ್ನಿಗೆ ಪತ್ರ ಬರೆಯಲಾಗಿದೆ, ಆದರೆ ಪರಿಶೀಲನೆ ಯಾಗುವುದರಲ್ಲಿ ತಡವಾಗಿದೆ. ಬಿ. ಡಿ. ಒ. ಸಂಬಂಧಪಟ್ಟವರು ರಜ ತೆಗೆದುಕೊಂಡು ಕಾರಿಪುರ ದಲ್ಲಿದ್ದಾರೆ. ಗಲಾಟೆಯಾದ ಮೇಲೆ 4–5 ಸಾವಿರ ರೂಪಾಯಿಗಳನ್ನು ಕಂಟ್ರಾಕ್ಟರುಗಳಿಂದ ತಂದು ಜಮಾಮಾಡಿಸಿದ್ದಾರೆ, ಜಾಗೃತ ಆಯೋಗಕ್ಕೆ ಕಣ್ಣುಮುಚ್ಚಾಲೆ ಆಟ ಆಡಿಸುತ್ತಿದ್ದಾರೆ, ಆಗಿರುವ ದುರಾಡಳಿತವನ್ನು ಮುಚ್ಚುವುದಕ್ಕೆ ಏನೇನೊ ಮಾಡುತ್ತಿದ್ದಾರೆ. ಜಾಗೃತ ಆಯೋಗದಲ್ಲಿ ರೆಗ್ಯುಲರ್ ಪೋಲೀಸು ದಳದವರು, ಪಿ.ಡಬ್ಲ್ಯು. ಇಲಾಖೆಯವರು ಮುಂತಾದವರನ್ನು ತೆಗೆದು ಕೊಂಡಿದ್ದಾರೆ, ಅವರೆಲ್ಲಾ ಲಂಚಕೋರರಾಗಿದ್ದಾರೆ. ಹಣ ದುರುಪಯೋಗಮಾಡಿ, ದುರಾಡಳಿತ ನಡೆಸುವವರ ಕೈಗೆ ಅಧಿಕಾರ ಕೊಟ್ಟು, ಬಡವರಿಗೆ ಜಮೀನನ್ನು ಹಂಚದೆ, ಸಾಲದ ಹಣವನ್ನು ಹಾಳುಮಾಡಿ ಎಕ್ಸೆಸ್ ಗ್ರಾಂಟಿಗೆ ಬೇಡಿಕೆ ಇಟ್ಟರೆ ಅದನ್ನು ಹೇಗೆ ತಾನೆ ಒಪ್ಪಲು ಸಾಧ್ಯ ?

ಅದಕ್ಕೆ ನಾನು ಮಾನ್ಯ ಸದನದ ವಾಟಾಳ್ ನಾಗರಾಜ್‌ರವರು ಮಾತನಾಡಿದ್ದನ್ನು ಸಂಪೂರ್ಣವಾಗಿ ಒಪ್ಪುತ್ತೇನೆ. ಅವರು ಬರೇ ಸುತ್ತುಗಟ್ಟತಕ್ಕ ವಿಷಯ ಹೇಳಿದರು, ನನ್ನದು ಹಾಗಲ್ಲ, ನಿಮ್ಮನ್ನು ಸಾರ್ವಜನಿಕ ಸ್ಥಳದಲ್ಲಿ ಚೌಕದಲ್ಲಿ ನಿಲ್ಲಿಸಿ ವಿಚಾರಣೆ ಮಾಡಿ ಈ 22 ವರ್ಷಗಳ ದುರಾಡಳಿತಕ್ಕಾಗಿ ತಕ್ಕ ಶಿಕ್ಷೆ ಕೊಟ್ಟರೆ ಅದು ಸಂತೋಷಪಡತಕ್ಕ ಕಾಲ ಎಂದು ಭಾವಿಸುತ್ತೇನೆ. ಈ ಹೆಚ್ಚುವರಿ ಬೇಡಿಕೆಮೇಲೆ ನಮ್ಮ ಒಪ್ಪಿಗೆ ಕೊಡುವುದಕ್ಕೆ ನಾನು ತಯಾರಾಗಿಲ್ಲ, ಅವರಿಗೆ ಕೋಟಿ ಗಟ್ಟಲೆ ಅಲ್ಲ ಎಷ್ಟೇ ಹಣ ಕೊಟ್ಟರೂ ದುರುಪಯೋಗ ಮಾಡಿಕೊಳ್ಳುತ್ತಾರೆ ಎಂದು ನನ್ನ ಮನಸ್ಸಿನಲ್ಲಿ ಹೆದರಿಕೆ ಇದೆ. ಆ ದೃಷ್ಟಿಯಿಂದ ಅವರು ಬಡವರಮೇಲೆ ಅನೇಕ ವಿಧವಲ್ಲಿ ತೆರಿಗೆ ಗಳನ್ನು ಹಾಕಿ ವಸೂಲು ಮಾಡುತ್ತಾರೆ. ಅವರ ನೈತಿಕ ಅಧಃಪತನ ಎಷ್ಟುಮಟ್ಟಿಗೆ ಆಗಿದೆ ಎಂದರೆ ಆಡಳಿತ ನಡೆಸತಕ್ಕವರಿಗೆ ಫೈನಾನ್ಸ್ ಕಮಿಷನನಿಂದ ನಮಗೆ ಬರಬೇಕಾದ ಹಣವನ್ನು ಕ್ಲೈಂ ಮಾಡುವುದಕ್ಕೂ ಕೂಡ ಎಷ್ಟು ರೈಟ್‌ಫುಲ್ ಆಗಿ ತೆಗೆದುಕೊಳ್ಳಬೇಕಾಗಿತ್ತೋ ಅದನ್ನೂ ತೆಗೆದು ಕೊಳ್ಳುವುದಕ್ಕೂ ಕೂಡ ಶಕ್ತಿಹೀನರಾಗಿದ್ದಾರೆ. ಅವರ ಕೈಯಲ್ಲಿ ಮತ್ತೆ ಇಷ್ಟೊಂದು ಹಣವನ್ನು ಕೊಡುವುದಕ್ಕೆ ಸಾಧ್ಯವಿಲ್ಲ. ಇದು ಬಕಾಸುರ ಸರ್ಕಾರ, ಬಕಾಸುರ ಭೀಮನನ್ನು ತಿಂದು, ಪಾಂಡವರನ್ನು ತಿನ್ನುವ ಮಟ್ಟಕ್ಕೂ ಹೋಗಿದ್ದಂತೆ, ಆ ರೀತಿ ಈ ಸರ್ಕಾರಕ್ಕೆ ಎಷ್ಟು ತೆರಿಗೆ ಗಳನ್ನು ಕೊಟ್ಟರೂ ಸಾಲದು, ಎಷ್ಟು ಹಣವನ್ನು ಕೊಟ್ಟರೂ ಸಾಲದು ಎಂದು ಹೇಳಿ ಈ ಹೆಚ್ಚುವರಿ ಬೇಡಿಕೆಯನ್ನು ವಿರೋಧಿಸುತ್ತೇನೆ. ಈ ಹಣ ಮಂಜೂರು ಮಾಡಬಾರದು, ಹಣ ಹಾಳು ಮಾಡುತ್ತಾ ಇದ್ದಾರೆ ಆದ್ದರಿಂದ ಇದಕ್ಕೆ ಒಪ್ಪಿಗೆ ಕೊಡಬಾರದು ಎಂಬ ಮಾತನ್ನು ಪುನಃ ತಮ್ಮ ಅವಗಾಹನೆಗೆ ತಂದು ನನ್ನ ಮಾತನ್ನು ಮುಗಿಸುತ್ತೇನೆ.

Sri H. SIDDAVEERAPPA.—Sir, I oppose the supplementary estimates that have been placed before this House by the Hon'ble Finance Minister. While doing so, I am really pained to see the sad and miserable plight of this unfortunate State. This unenviable position is due to mismanagement of the public finance of the State during the last one decade. Sir, I was pondering yesterday night as to why the Finance Commission has given such a very disappointing report so far as the Mysore State is concerned. In a way I feel what they have done, may be after all for the good of this country, though not for the state. Because give any money to this Government, give them as big a quantity as the size of Nandi hills, you may be rest assured that they

(SRI H. SIDDAVEERAPPA)

will spend it away. There is no limit and there is no method in spending the money. The only thing you know is, getting as much money as you can, and spending it.

So far as the public finances are concerned, I gave a picture once during the Budget Session when this new State was formed. We had only Rs. 23 crores of public debts. But to-day our public debts have swelled up to an astronomical figure, Rs. 500 crores. If you just analyse how much of it has been given to production purposes and how much has been given to irrigation purposes, you will find that most of the amount has been squandered without any return and without any purpose. I know the Finance Minister very well. I know what his difficulties are. If the Finance Minister puts a brake for any demand, immediately the concerned Minister pounces upon him. I will give one instance from which you can judge how the expenditure has been swelled. Take this Text Book Committee business. The text books were nationalised. They did not include this in the Budget Estimates. They want to have this extravagant expenditure in this connection regularised as a new service. They have simply said that only Rs. 100 is required since there is every possibility of finding the amount of Rs. 2,35,650 by re-appropriation. This is how they are doing things. You are spending huge sums of money in the Food Department and creating new posts. Unless you adopt economy measures, the financial position of the State will never improve. Every pie you save is as good as earning 2 pies. If you follow up that line, you will be in a position to husband our resources and see they are usefully spent, I know the Finance Minister will never agree for the creation of new service. Where is the need to create new service and spend lakhs and lakhs of rupees.

With regard to the special staff for Krishna and Godavari schemes, I do not know whether there is need for it when a Committee has been appointed to determine the water position. I do not know what would be the opinion of the Committee. So far, there is no policy laid down by the Central Government with regard to the distribution of waters of Inter State Rivers. What is the basis on which you are going ahead to appoint the staff for this purpose. The Mysore Government has been neglected in almost all fields, just because these people are not taking proper action at proper time. These people will only open their eyes when their request is turned down by the Centre. Our industries are in a miserable plight. We are sinking crores and crores of rupees and the return is very negligable and in some cases nil. You have spent Rs. 460 crores on the New Government Electrical Factory, Old Electrical Factory and on the Electricity Board. Nobody cares to see whether they are working properly or not. They do not know what is happening there. If you husband your resources, you will be able to earn annually at least Rs. 10 crores from our industries. To-day what is

happending? You have no control over the administration of the industries. I am reminded of a famous passage from our esteemed literature Sri D. V. Gundappa in "MANKU THIMMANA KAGGA." What he has said therein fits in completely with the Government. What he says is. ಈ ದಿವಸ ನಮ್ಮ ಸರ್ಕಾರದ ಸ್ಥಿತಿ ಏನಾಗಿದೆಯೆಂದರೆ—

> "ಹೊಳೆ ಬಂದಿದೆ, ಬಿರುಗಾಳಿ ಬೀಸುತ್ತಿದೆ, ದೋಣಿಯಲ್ಲಿ ಹತ್ತಿಕುಳಿತು ನಾವು ಹೋಗುತ್ತಿದ್ದೇವೆ, ಸಾರಾಯಿ ಕುಡಿದವನು ಹುಟ್ಟುಹಾಕುತ್ತಿದ್ದಾನೆ, ದೇವರೇ ಗತಿ ನಮ್ಮನ್ನು ಈ ದೋಣಿ ಎಲ್ಲಿಗೆ ಕೊಂಡೊಯ್ಯುತ್ತದೋ?...

ಆ ಸ್ಥಿತಿಯಲ್ಲಿದೆ ನಮ್ಮ ಸರ್ಕಾರ.

I know what is going to happen. Tomorrow a stage will come for this Government. When what they collect from sales-tax and various other sources would be just sufficient to meet the expenditure on salaries, T.A. and D.A. including Members salaries and nothing would be left for any development work. That will be your unfortunate position. Where is the Krishna Project, where is the Cauvery project ? I therefore plead with you not to squander away public money on M.S.K. Mills and various other industries, because people connected with those concerns are your favourites. You have wasted crores and crores of public money without any hope of recovery. If you had properly husbanded the State's resources, we could have had Krishna and Cauvery and other projects.

Sir, I am not going to take much time. I can only say that unless and until you cry a halt to the extravagant spending of the Department of Co-operation under the aegis of Mr. Jamkhandimath, the Registrar and our Hon' ble friend Sri Nad Gowda, this State will be reduced to pauperism. Because, you can see in the month of March, you have given to 29 societies at the rate of Rs. 10,000 per society and spent about Rs. 2,90,000. With that money you could have serviced not less than 50 irrigation pump sets. I am sure you have given most of this money to men of your choice. I am asking you to place all these facts before this House. In this Co-operative Department, in the National Marketing Co-operative Society, you have squandered money. That is how the Co-operative Department becomes enemy No. I of our State. How many types of corruption are taking place? I can give you one case. In one case an Assistant Registrar of Co operative Societies had knocked away Rs. 40,000 in a marketing co-operative society. There was a test audit and it was established that he was the culprit. The Co-operative Department has promoted him and made him the Secretary and Deputy-Registrar and posted him to a bigger place which they call JANATHA BAZAR where transactions to the tune of lakhs of rupees take place, so that he could fatten himself. I actually wrote letters to the Chief Minister and Co-operation Minister. Beyond giving me a reply stating "we have received your letter and the matter is engaging attention," nothing was done. I have got so many letters of that type. I can

(SRI H. SIDDAVEERAPPA)

show you. Where is your enquiry ? Show me even one case. You want us to give money for all kinds of things. Why should we give it ? Time will come when we will have to go to villages and tell the people not to pay taxes, because Government is wasting and squandaring away public money. We will tell them. For what you do here, the whole party will have to take the blame, and friends who are blindly supporting the Government, at least in their Party meeting, must take care to bring these facts to the notice of the Government. Some time, we will have to examine every aspect of it. At this rate, we cannot get any money for nation-building activities. Therefore, I have been requesting you as the custodian of this House, to kindly see that a Committee is constituted. The Minister for Parliamentary Affairs said that a Committee would be constituted to examine the work of various industrial undertakings. That they have not done. I do not know, why they seem to feel Hunku - Punky of any suggestions that come from us. Therefore, for these reasons I feel that any moneys that may be given to the Government, will be ill-spent and we are not in a position to agree to this. I am really surprised at this and I am requesting the Minister for Finance that he should keep the key of the treasury very safe and never pass any item of expenditure beyond what is provided in the Budget. Whatever is included in the Budget, you spend. Then only you will be safe. What was the position in the olden days ? We had very eminent men as Finance Ministers. Once, our esteemed Dewan, Sri N. Madhava Rao, told us, "Look here, we had kept 18 crores of rupees liquid cash in the treasury. You have spent away all that money and what is more, you have made the State a debtor and not only our children and even grand children have to bear the debt service charges, because even the interest we have to pay on these debts runs into huge figures." I think the interest charges come to about Rs. 15 crorés per annum. They have brought the State to this pass by their mal-administration. The time for taking stock of these things will not be far off. Then the whole lot of them—there are many friends of mine also there; I cannot brand every one of them with the same brush have to bear the responsibility for mal-administration that has gone on for ten years ; responsibilities will lie on the head-man and that head-man will have to answer one day for all the misdeeds as a result of which, the State is made to suffer.

With these few words, I oppose the grants, Sir.

MR. SPEAKER.—What was the agreement yesterday ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಇನ್ನು ನಮ್ಮ ಕಡೆ ಶ್ರೀ ಗೋಪಾಲಗೌಡರು ಮತ್ತು ಅಜೀಜ್ ಸೇಟರು ಇಬ್ಬರು ಮಾತ್ರ ಮಾತನಾಡತಕ್ಕವರಿದ್ದಾರೆ. ಅವರಿಬ್ಬರಿಗೂ ಐದೈದು ನಿಮಿಷ ಅವಕಾಶ ಕೊಟ್ಟರೆ ಸಾಕು. ಹಾಗೂ ಒಂದು ವೇಳೆ ನಿಗದಿಯಾದ ವೇಳೆಯಲ್ಲಿ ಇದು ಮುಗಿಯದಿದ್ದರೆ ಸರ್ಕಾರಿ ಕಾರ್ಯಕಲಾಪಗಳನ್ನು ಸದಸ್ಯರು ಇನ್ನೂ ಅರ್ಧಗಂಟೆಯಕಾಲ ಹೆಚ್ಚಾಗಿ ಕುಳಿತು ಅದನ್ನು ಮುಗಿಸಿಕೊಡುತ್ತೇವೆ.

† ಶ್ರೀ ಎಸ್. ಗೋಪಾಲಗೌಡ (ತೀರ್ಥಹಳ್ಳಿ).—ಮಾನ್ಯ ಅಧ್ಯಕ್ಷರೇ, ಅನುಪೂರಕ ಅನುದಾನಗಳನ್ನು ನಾನು ವಿರೋಧಿಸುತ್ತೇನೆ. ಈಗ ಕೇಳಿರತಕ್ಕ 39 ಕೋಟಿ 43 ಲಕ್ಷ ರೂಪಾಯಿಗಳಲ್ಲಿ ಸುಮಾರು 34 ಕೋಟಿ ರೂಪಾಯಿಗಳು ಅಡ್ಜಸ್ಟ್‌ಮೆಂಟ್ ಮಾಡುವುದಕ್ಕೆ ಎಂಬುದಾಗಿ ಹೇಳಿದ್ದಾರೆ. 1 ಕೋಟಿ 90 ಲಕ್ಷ ರೂಪಾಯಿಗಳಷ್ಟು ಸರ್ಕಾರಕ್ಕೆ ಹೊಸ ಕಮಿಟ್‌ಮೆಂಟ್ ಬರುತ್ತದೆಂದು ಹೇಳಿದ್ದಾರೆ. ಆದ್ದರಿಂದ ನಾನು ವಿಶೇಷವಾಗಿ ಪ್ರತಿಯೊಂದು ಬೇಡಿಕೆಯನ್ನೂ ಕೂಡ ಕುರಿತು ಹೇಳುವುದಿಲ್ಲ. ಸಮಯವೂ ಇಲ್ಲ. ಮುಖ್ಯವಾಗಿ ಮಾನ್ಯ ಸಿದ್ಧವೀರಪ್ಪನವರು ಕೆಲವು ವಿಷಯಗಳನ್ನು ಪ್ರಸ್ತಾಪಮಾಡಿದ್ದಾರೆ. ಅದರಲ್ಲಿ ಸಹಕಾರಿ ಸಂಸ್ಥೆ ಎನ್ನುವ ಹೆಸರಿನಲ್ಲಿ ಏನು ಸರ್ಕಾರದಿಂದ ಹಣವನ್ನು ಅವರು ಪಡೆದುಕೊಂಡಿದ್ದಾರೋ ಅದರಲ್ಲಿ ಆಗತಕ್ಕ ದುರುಪಯೋಗವನ್ನು ತಡೆಗಟ್ಟದಿದ್ದರೆ ಈಗಾಗಲೇ ದಿವಾಳಿಯಾಗಿರತಕ್ಕ ರಾಜ್ಯ ಇನ್ನೂ ದಿವಾಳಿ ಆಗುತ್ತದೆಂದು ಅವರು ಹೇಳಿದ್ದಾರೆ. ಈಗ ಸುಮಾರು 31 ಕೋಟಿ ರೂಪಾಯಿಗಳ ಖೋತಾ ಈ ವರ್ಷದ ಆಯವ್ಯಯದಲ್ಲಿದೆ. ಈಗ ತುಕೋಲ್ ಕಮಿಷನ್ ಆಯೋಗದವರು ಕೊಟ್ಟಿರತಕ್ಕ ಸಲಹೆಗಳನ್ನು ಸರ್ಕಾರದವರು ಕಾರ್ಯಗತ ಮಾಡಿದ್ದರೆ ಸುಮಾರು 7 ರಿಂದ 12 ಕೋಟಿ ರೂಪಾಯಿಗಳವರೆಗೂ ಖರ್ಚು ಬರುತ್ತಿತ್ತು. ಅದಕ್ಕೆ ಏನು ಮಾರ್ಗವನ್ನೂ ಇವರಿಗೆ ಕಂಡುಹಿಡಿಯುವುದಕ್ಕೆ ಸಾಧ್ಯವಾಗಲಿಲ್ಲ. ಆಯೋಗವನ್ನೂ ಇವರಿಗೆ ಕಂಡುಹಿಡಿಯುವುದಕ್ಕೆ ಸಾಧ್ಯವಾಗಲಿಲ್ಲ. ಆಯೋಗವನ್ನು ರಚಿಸಿದಮೇಲೆ ಅವರ ವರದಿ ಬಂದಮೇಲೆ ಮರುಮಾತನಾಡದೆ ತಿದ್ದುಪಡಿಗಳೊಂದಿಗೆ ಅದನ್ನು ಅಂಗೀಕಾರಮಾಡುವುದು ರಾಜ್ಯ ಸರ್ಕಾರದ ಆದ್ಯ ಕರ್ತವ್ಯವೆಂದು ನಾನು ಒತ್ತಿ ಹೇಳುತ್ತೇನೆ. ಆದರೆ ಮಾನ್ಯ ಮಂತ್ರಿಗಳು ಅದರ ಬಗ್ಗೆ ಕೆಲವು ಹಾರಿಕೆಯ ಉತ್ತರ ಕೊಟ್ಟಿದ್ದು ನೋಡಿದರೆ, ಅದು ಅವರ ಜವಾಬ್ದಾರಿಯುತ ವರ್ತನೆಯಲ್ಲವೆಂದು ನಾನು ಹೇಳುತ್ತೇನೆ. ಈ ಬೇಡಿಕೆಯನ್ನು ಮೊದಲನೆಯ ಕಮಿಟ್‌ಮೆಂಟ್ ಆಗಿ ಸೇರಿಸಬೇಕಾಗುತ್ತದೆ. ದುರದೃಷ್ಟವಶಾತ್ ನಿನ್ನೆ ಹಣಕಾಸಿನ ಮಂತ್ರಿಗಳು ಐದನೆಯ ಹಣಕಾಸಿನ ಆಯೋಗದ ವರದಿ ಇನ್ನೂ ಬಂದಿಲ್ಲವೆಂದು ಹೇಳಿದ್ದಾರೆ. ಅದರಲ್ಲಿ ಅವರ ಕಳವಳ ನಮಗೆ ಅರಿವಾಗಿದೆ, ಹೆಚ್ಚಿಗೆ ಅವರು ನಮಗೆ ಹಣವನ್ನು ಕೊಟ್ಟಿಲ್ಲವೆಂಬ ಅವರ ಕಳವಳದ ಬಗ್ಗೆ ನಮಗೆ ಸಹಾನುಭೂತಿ ಇದೆ. ಅವರು ಕರ್ತವ್ಯಗಳನ್ನು ಎಷ್ಟರಮಟ್ಟಿಗೆ ನಡೆಸಿದ್ದಾರೆಂಬ ಬಗ್ಗೆ ವಿಷಾದ ಇದೆ. ಬಹಳ ಸಾರಿ ಸಾಕಷ್ಟು ಆಸ್ಥೆ ವಹಿಸಿ ಅಂತಹ ಆಯೋಗದವರು ಇಲ್ಲಿಗೆ ಬಂದಾಗ ಏನೊಂದು ವಾಸ್ತವ ಚಿತ್ರವನ್ನು ಇಟ್ಟು ನಮ್ಮ ಬೇಡಿಕೆ, ಹಣಕಾಸಿನ ಚಿತ್ರವೇನೆಂಬುದನ್ನು ಹೇಳಿದಮೇಲೆ ಅವರು ಅದರ ಬಗ್ಗೆ ಒಂದು ವರದಿಯನ್ನು ನಮಗೆ ಕೊಟ್ಟಮೇಲೆ ನಾವು ಟೀಕೆ ಮಾಡುವುದು ಅನುಚಿತವೆಂದು ನನಗನ್ನಿಸುತ್ತದೆ. There are States which have abolished land revenue : There are States which have introduced food subsidies ಉತ್ತರ ಪ್ರದೇಶದಲ್ಲಿ, ಮಧ್ಯ ಪ್ರದೇಶದಲ್ಲಿ, ಬಿಹಾರದಲ್ಲಿ ಕಂದಾಯ ಮಾಫಿ ಮಾಡಿದ್ದಾರೆ ಮದ್ರಾಸಿನಲ್ಲಿ ಸಬ್ಸಿಡಿ ಕೊಟ್ಟಿದ್ದಾರೆ. They have followed the path of cheap popularity ಎಂದು ಹೇಳಿದರು. ಆ ಮಾತನ್ನು ನಾನು ತೀವ್ರವಾಗಿ ವಿರೋಧಿಸುತ್ತೇನೆ. ಅಕ್ಕಪಕ್ಕದ ರಾಜ್ಯಗಳಲ್ಲಿ ಜನರ ಹಿತ ಸಾಧನೆಗಾಗಿ ತೆಗೆದುಕೊಂಡಂಥ ಕಾರ್ಯಕ್ರಮವನ್ನು ನಮ್ಮ ಹಣಕಾಸಿನ ಮಂತ್ರಿಗಳು ಉದ್ವೇಗದಲ್ಲಿ ಅಲ್ಲಗಳೆದಿರುವುದನ್ನು ನಾನು ವಿರೋಧಿಸುತ್ತೇನೆ. ಅದಕ್ಕಾಗಿ ಅವರು ವಿಷಾದವನ್ನು ವ್ಯಕ್ತಪಡಿಸಿದರೆ ಒಳ್ಳೆಯದು. ಇದು ನಿಮಗೆ ಗೌರವವಲ್ಲ. ನೀವು ಲ್ಯಾಂಡ್ ರೆವಿನ್ಯೂ ಅಬಾಲಿಷ್ ಮಾಡಬೇಕಾಗುತ್ತದೆ,ಸಮಯ ಬಿದ್ದರೆ ಫುಡ್ ಸಬ್ಸಿಡಿ ಕೊಡಬೇಕಾಗುತ್ತದೆ, ಸಮಯಬಿದ್ದರೆ, ಪಂಪುಸೆಟ್ಟಿಗೆ ಒದಗಿಸುವ ವಿದ್ಯುಚ್ಛಕ್ತಿಗೋಸ್ಕರ ಸಬ್ಸಿಡಿ ಕೊಡಬೇಕಾಗುತ್ತದೆ. ಇದು ಕಲ್ಯಾಣ ರಾಜ್ಯವೆಂದು ಹೇಳಿದಮೇಲೆ ಎಲ್ಲರನ್ನೂ ಒಂದೇ ಸಮಾನ ನೋಡಬೇಕು. ತೆರಿಗೆ ಕೊಡುವ ಶಕ್ತಿ ಇರಲಿ, ಇಲ್ಲದೆ ಇರಲಿ ಹೆಚ್ಚಿಗೆ ಅದನ್ನು ಹಾಕುವುದು ನೀತಿನಿಯಮವಲ್ಲವೆಂದು ನಾನು ಹೇಳುತ್ತೇನೆ. ಇನ್ನು ರಾಜ್ಯದ ಹಿತ ನಮಗೂ ಇದೆ. ಕೇಂದ್ರ ಸರ್ಕಾರದವರು ಹೆಚ್ಚಿಗೆ ಹಣ ಕೊಡಬೇಕೆಂದು ನಮಗೂ ಆಸಕ್ತಿ ಇದೆ. ಒಂದುಕಡೆ ಶಿಫಾರಸು ಪಡೆಯುವುದಕ್ಕಾಗಿ ಯಾವುದೋ ಅಂಕಿಅಂಶಗಳನ್ನು ಸ್ಟ್ಯಾಟಿಸ್ಟಿಕಲ್ ಡಿಪಾರ್ಟ್‌ಮೆಂಟಿನಿಂದ ತೆಗೆದುಕೊಂಡು ನಮಗೆ ಬರತಕ್ಕ ಆದಾಯ ಜಾಸ್ತಿ ಇದೆಯೆಂದು ದೇಶದಮುಂದೆ ಇಡುವುದು, ಇನ್ನೊಂದು ಭಾಗದಲ್ಲಿ ನಮ್ಮ ಕೈಗಾರಿಕೆಗಳು ಬೆಳೆಯುತ್ತಾ ಇಲ್ಲ, ನಮ್ಮ ದೇಶದಲ್ಲಿ ನೀರಾವರಿ ಕೆಲಸಕಾರ್ಯಗಳಿಗೆ, ಮತ್ತು ಅಣೆಕಟ್ಟುಗಳನ್ನು ಕಟ್ಟುವುದಕ್ಕೆ ಹಣವಿಲ್ಲ, ನಮಗೆ ಹಣದ ಕೊರತೆ ಇದೆ, ಸಿಬ್ಬಂದಿಗೆ ಸಂಬಳ ಕೊಡುವುದಕ್ಕೆ ದುಡ್ಡು ಇಲ್ಲವೆಂದು ಹೇಳುವುದು. ಇದು ಸಾರ್ವಜನಿಕರಿಗೆ ಸಂಬಂಧಪಟ್ಟ ವಿಷಯ. ನಮ್ಮ ರಾಜ್ಯದ ಪರ್‌ಕ್ಯಾಪಿಟಾ ಇನಕಂ ಜಾಸ್ತಿ ಕೊಟ್ಟು ನಮ್ಮ ದೇಶಕ್ಕೆ ಮೋಸಮಾಡಿದ್ದಾರೆ. ತಪ್ಪುಮಾಡಿದ್ದಾರೆ, ಈಗ ಶ್ರೀಮತಿ ಇಂದಿರಾ ಗಾಂಧಿಯವರಿಗೆ, ಶ್ರೀ ತ್ಯಾಗಿಯವರಿಗೆ ಬುದ್ಧಿ ಕಲಿಸುತ್ತೇವೆ, ಗತಜಲ ಸೇತುಬಂಧನ ಮಾಡುತ್ತೇನೆಂದು ಹೇಳುತ್ತಾರೆ. ನಮ್ಮನ್ನು ಒಪ್ಪಿಸುವುದಕ್ಕೆ ಆ ರೀತಿಯಾಗಿ ಮಾತನಾಡಬಾರದು. ಈ ರಾಜ್ಯದ ಜನರನ್ನು ಒಪ್ಪಿಸುವುದಕ್ಕೆ ಆ ರೀತಿ ಮಾತನಾಡಬಾರದು. ನೀವು ಮಾಡಿದಂಥ

(ಶ್ರೀ ಎಸ್. ಗೋಪಾಲಗೌಡ)

